# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 255 Issue: 255 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 16.04.2025 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2







## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ

ಎಸ್ ಎಸ್ ಎಲ್ ಸಿ ಪರೀಕ್ಷಾ ಮೌಲ್ಯಮಾಪನ ಪ್ರಾರಂಭ





Ads Starts
from Rs.1000
Contact:
94486 33038


# ಮಕ್ಕಳ ಮನಸ್ಸನ್ನು ಸ್ಪರ್ಶಿಸುವ ಶೈಕ್ಷಣಿಕ ಪ್ರಯತ್ನಕ್ಕೆ ಮೆಚ್ಚುಗೆ

### ಬೇಸಿಗೆ ಶಿಬಿರದ ಮಕ್ಕಳ ಕೈಯಲ್ಲಿ ಹಂಪಿ ಟೈಮ್ಸ್‌ನಲ್ಲಿ ಪ್ರಕಟಿತ ಟೆಕ್‌ಲೇಖನ ಪ್ರತಿ

### ಬಳ್ಳಾರಿ ಅಕ್ಷರ ಗ್ಲೋಬಲ್ ಶಾಲೆ ಮುಖ್ಯಸ್ಥೆ ಅನುರಾಧ ಅವರ ಜಾಗೃತಿ ಕಾರ್ಯಕ್ಕೆ ಶ್ಲಾಘನೆ




ಡೋಪಮೈನ್ ಡಿಟಾಕ್ಸ್ : ಮನಸು ಮರಳ ಅರಳಲಿ!

■ ಹಂಪಿ ಟೈಮ್ಸ್ ಹೊಸಪೇಟೆ

ಬಳ್ಳಾರಿ ಅಕ್ಷರ ಗ್ಲೋಬಲ್ ಶಾಲೆಯ ಚಿಣ್ಣರು ಹಂಪಿ ಟೈಮ್ಸ್‌ನಲ್ಲಿ ಪ್ರಕಟಗೊಂಡ ಡೊಪಮೈನ್ ಡಿಟಾಕ್ಸ್ ಲೇಖನ ಪ್ರದರ್ಶಿಸಿ ಮೊಬೈಲ್ ನಿಷೇಧ ಕುರಿತು ಜಾಗೃತಿಗೆ ಮುಂದಾದ ಕ್ಷಣ...

ಮೊಬೈಲ್‌ನಿಂದ ಮಕ್ಕಳನ್ನು ಹೊರತರುವುದು ಹೇಗೆ ಎಂಬ ಚಿಂತೆ ಪಾಲಕರನ್ನು ಕಾಡಲಾರಂಭಿಸಿದ ಬೆನ್ನಲ್ಲೆ ಶಿಕ್ಷಣ ತಜ್ಞ, ತಂತ್ರಜ್ಞಾನ ಪರಿಣಿತ ಲೇಖಕ ಎಸ್.ಎಂ.ಶಶಿಧರ ಅವರು ಬರೆದ ಡೋಪಮೈನ್ ಡಿಟಾಕ್ಸ್ ಲೇಖನ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ ಏ.15ರಂದು ಪ್ರಕಟವಾಗಿತ್ತು. ಲೇಖನದ ಡಿಜಿಟಲ್ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ಬೇಸಿಗೆ ಶಿಬಿರದ ಮಕ್ಕಳ ಕೈಗಿಟ್ಟು ಮೊಬೈಲಿನಿಂದಾಗುವ ಅಡ್ಡ ಪರಿಣಾಮಗಳ ಕುರಿತು ಪಾಲಕರು ಮತ್ತು ಮಕ್ಕಳಲ್ಲಿ ಜಾಗೃತಿ ಮೂಡಿಸಿರುವ ಬಳ್ಳಾರಿ ಅಕ್ಷರ ಗ್ಲೋಬಲ್ ಶಾಲೆಯ ಮುಖ್ಯಸ್ಥರಾದ ಡಾ. ಅನುರಾಧ ಅವರ ಕಾರ್ಯಕ್ಕೆ ಪಾಲಕರು ಶ್ಲಾಘಿಸಿದ್ದಾರೆ.

ಮಕ್ಕಳಲ್ಲಿ ಬದಲಾವಣೆ ಕಾಣಬೇಕೆಂದು ಕೇವಲ ಚಿಂತನೆ ಮಾಡುತ್ತಾ ಕುಳಿತರೆ ಸಾಲದು, ಉತ್ತಮ ವಿಚಾರಗಳು ತಿಳಿದ ತಕ್ಷಣವೇ ಮಕ್ಕಳಿಗೆ ಉಣಬಡಿಸುವ ಮತ್ತು ಪಾಲಕರಲ್ಲೂ ಅರಿವು ಹೆಚ್ಚಿಸುವ ಮೂಲಕ ಬದಲಾವಣೆ ಕಾಣಬೇಕೆನ್ನುವ ಶಾಲಾ ಮುಖ್ಯಸ್ಥರ ಚಿಂತನೆಗೆ ಮೆಚ್ಚುಗೆ ವ್ಯಕ್ತವಾಯಿತು. ಶಾಲೆಯ ಮುಖ್ಯಸ್ಥರ ಕಾರ್ಯಕ್ಕೆ ಲೇಖಕ ಎಸ್.ಎಂ.ಶಶಿಧರ, ಹಂಪಿ ಟೈಮ್ಸ್ ಬಳಗ ಹರ್ಷವ್ಯಕ್ತಪಡಿಸಿದೆ.

# ಭತ್ತ ಕಟಾವು ಯಂತ್ರಗಳ ಬಾಡಿಗೆ ದರ ನಿಗದಿ: ಆದೇಶ

ಹಂಪಿ ಟೈಮ್ಸ್ ಕೊಪ್ಪಳ : ಕೊಪ್ಪಳ ಜಿಲ್ಲೆಯಲ್ಲಿ ಭತ್ತ ಕಟಾವು ಯಂತ್ರಗಳ ಬಾಡಿಗೆ ದರವನ್ನು ನಿಗದಿಪಡಿಸಿ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

2024-25 ನೇ ಸಾಲಿನ ಬೇಸಿಗೆ ಹಂಗಾಮಿನಲ್ಲಿ 50,930 ಹೆಕ್ಟರ್ ಪ್ರದೇಶದಲ್ಲಿ ಭತ್ತದ ಬೆಳೆಯ ಕ್ಷೇತ್ರ ಆವರಿಸಿದೆ. ಸದ್ಯ ಭತ್ತದ ಬೆಳೆಯು ಬಹುತೇಕ ಕಾಳು ಬಲಿಯುವ ಹಂತದಲ್ಲಿದ್ದು, ಈಗಾಗಲೇ ಹಲವು ಕಡೆ ಕಟಾವು ಪ್ರಾರಂಭವಾಗಿರುತ್ತದೆ. ಜಿಲ್ಲೆಯಲ್ಲಿ ಶೇ 95 ರಷ್ಟು ರೈತರು ಭತ್ತದ ಬೆಳೆಯನ್ನು ಭತ್ತ >>4


# ಗುಡೇಕೋಟೆ ನಾಗರಾಜ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ



■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಷಾ.ಭವರಲಾಲ್ ಬಾಬುಲಾಲ್ ನಾಹರ್ ಶಿಕ್ಷಣ ಮಹಾವಿದ್ಯಾಲಯದ ಆಡಳಿತ ಮಂಡಳಿಯ ನೂತನ ಅಧ್ಯಕ್ಷರಾಗಿ ಗುಡೇಕೋಟೆ ನಾಗರಾಜ ಮಂಗಳವಾರ ಅಧಿಕಾರ ಸ್ವೀಕರಿಸಿದರು.

ಕಾರ್ಯಕಾರಿ ಸಮಿತಿಯ ತೀರ್ಮಾನದಂತೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಧಿಕಾರ ಸ್ವೀಕಾರ ಸಂದರ್ಭದಲ್ಲಿ ಪಿಡಿಐಟಿ ಮಹಾವಿದ್ಯಾಲಯದ ನೂತನ ಅಧ್ಯಕ್ಷ ಕಲ್ಗುಡಿ ಮಂಜುನಾಥ, ಮುನಿರಾಬಾದನ ವಿಜಯನಗರ ಸಂಯುಕ್ತ ಪದವಿಪೂರ್ವ ಕಾಲೇಜು ಮತ್ತ ಪ್ರೌಢಶಾಲೆಗಳ ಅಧ್ಯಕ್ಷ ಜಾಲಿ ಪ್ರಕಾಶ, ವೀ.ವಿ.ಸಂಘದ ಹಾಗೂ ಇತರ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು, ಅಜೀವ ಸದಸ್ಯರು, ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡರು ಸನ್ಮಾನಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಎನ್.ವಿಶ್ವನಾಥಗೌಡ ಸ್ವಾಗತಿಸಿದರು.ಐ.ಕ್ಯೂ.ಎಸ್.ಸಿ ಸಂಯೋಜಕರು, ವಿದ್ಯಾರ್ಥಿ ಸಂಘದ ಸಂಚಾಲಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಮತ್ತು ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.



ಹೊಸಪೇಟೆಯಲ್ಲಿರುವ ವೀ.ವಿ.ಸಂಘದ ಪಿಡಿಐಟಿ ಮಹಾವಿದ್ಯಾಲಯದ ಆಡಳಿತ ಮಂಡಳಿಯ ನೂತನ ಅಧ್ಯಕ್ಷರಾಗಿ ಅಧಿಕಾರವಹಿಸಿಕೊಂಡ ಕಲ್ಗುಡಿ ಮಂಜುನಾಥ ಅವರನ್ನು ಸಮಾಜದ ಹಿರಿಯ ಮುಖಂಡರಾದ ಏಕಾಮರೇಶ್ ತಾಂಡೂರು ಸೇರಿದಂತೆ ಇತರರು ಸನ್ಮಾನಿಸಿದರು.

# ಬಳ್ಳಾರಿಯಲ್ಲಿ ಕನ್ನಡದ ತೇರು ಎಳೆಯೋಣ ಸಿದ್ಧರಾಗಿ

### ಡಿಸೆಂಬರ್-2025ರಲ್ಲಿ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆ

### ಕಸಾಪ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಕರೆ | ಅಖಂಡ ಜಿಲ್ಲೆಯಲ್ಲಿ 6ನೇ ಸಮ್ಮೇಳನ

■ ಹಂಪಿ ಟೈಮ್ಸ್ ಬಳ್ಳಾರಿ

ಈ ವರ್ಷದ ಕೊನೆಗೆ ಡಿಸೆಂಬರ್ ತಿಂಗಳಲ್ಲಿ ಬಳ್ಳಾರಿಯಲ್ಲಿ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲಾಗುತ್ತಿದ್ದು, ಕನ್ನಡದ ನಾಡು-ನುಡಿ, ಭಾಷಾಭಿಮಾನ, ಕನ್ನಡದ ಅಸ್ಮಿತೆಯನ್ನು ಇನ್ನಷ್ಟು ಬೆಳೆಸುವ ನಿಟ್ಟಿನಲ್ಲಿ ಕನ್ನಡದ ತೇರನ್ನು ಎಳೆಯಲು ನಾವೆಲ್ಲರೂ ಸಿದ್ಧರಾಗೋಣ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಕರೆ ನೀಡಿದರು.

ಅವರು, ಮಂಗಳವಾರದಂದು ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡೀಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆಯ ಕುರಿತು ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಕನ್ನಡ ಸಾಹಿತ್ಯ ಸಮ್ಮೇಳನಗಳು ಕನ್ನಡಿಗರಿಗೆ ಮತ್ತು ಸಾಹಿತ್ಯ ಪ್ರೇಮಿಗಳಿಗೆ ಹಬ್ಬ. ಕನ್ನಡದ ಇತಿಹಾಸವನ್ನು ಪ್ರಚುರಪಡಿಸುವುದು ಮತ್ತು ಭಾಷೆಯನ್ನು ಬೆಳೆಸುವುದು ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ. ಮುಖ್ಯವಾಗಿ ಸಮ್ಮೇಳನಗಳಲ್ಲಿ ಕನ್ನಡ ನಾಡು ನುಡಿಗೆ ಸಂಬಂಧಿಸಿದಂತೆ, ಭಾಷೆ ಬೆಳವಣಿಗೆ, ಗಡಿ ಭಾಗದ ಶಾಲಾ ವಿಚಾರಗಳ ಸಂಬಂಧಿಸಿದಂತೆ ಹಲವು ನಿರ್ಣಯಗಳನ್ನು ತೆಗೆದುಕೊಂಡು ಸರ್ಕಾರದ ಮುಂದಿಡಲಾಗುತ್ತದೆ ಎಂದು ಅವರು ತಿಳಿಸಿದರು.

ಇಂದಿನ ಪೀಳಿಗೆಗೆ ಮತ್ತು ಯುವಸಮುದಾಯಕ್ಕೆ ಕನ್ನಡ ಸಾಹಿತ್ಯ ಬಗೆಗಿನ ಅರಿವು ಮೂಡಿಸುವ ಉದ್ದೇಶದಿಂದ ರಾಜ್ಯ ಸರ್ಕಾರ, ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾಡಳಿತ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಇವರುಗಳ ಸಂಯುಕ್ತಾಶ್ರಯದಲ್ಲಿ ಡಿಸೆಂಬರ್ ಮಾಹೆಯಲ್ಲಿ ಬಳ್ಳಾರಿಯಲ್ಲಿ ಅದ್ದೂರಿಯಾಗಿ ಆಯೋಜಿಸಲಾಗುತ್ತಿದೆ ಎಂದರು.



### ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ 6ನೇ ಬಾರಿಗೆ ಸಾಹಿತ್ಯ ಸಮ್ಮೇಳನ

1) ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ 5 ಸಾಹಿತ್ಯ ಸಮ್ಮೇಳನಗಳು ನಡೆದಿವೆ. ಈ ಹಿಂದೆ 1920 ರಲ್ಲಿ ಮೊದಲ ಬಾರಿಗೆ ಅಖಂಡ ಜಿಲ್ಲೆಯ ಹೊಸಪೇಟೆಯಲ್ಲಿ ರೊದ್ದ ಶ್ರೀನಿವಾಸ ರಾವ್ ಅವರ ಅಧ್ಯಕ್ಷತೆಯಲ್ಲಿ 6 ನೇ ಸಮ್ಮೇಳನ ನಡೆಯಿತು.

2) 1926 ರ ಮೇ 22 ರಿಂದ 24 ರ ವರೆಗೆ ಮೂರು ದಿನಗಳ ಕಾಲ 12 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಳ್ಳಾರಿ ನಗರದಲ್ಲಿ ನಡೆದಿತ್ತು. ಇದರ ಅಧ್ಯಕ್ಷತೆಯನ್ನು ವಚನ ಪಿತಾಮಹ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ (ಫ.ಗು.ಹಳಕಟ್ಟಿ) ಅವರು ವಹಿಸಿದ್ದರು.

3) 12 ವರ್ಷಗಳ ನಂತರ ಮೂರನೇ ಬಾರಿಗೆ 1938 ರ ಡಿ.29 ರಿಂದ 31 ರ ವರೆಗೆ 23 ನೇ ಕನ್ನಡ ಸಾಹಿತ್ಯ ಸಮ್ಮೇಳನ ರಂಗನಾಥ್ ದಿವಾಕರ್ ಅವರ ಅಧ್ಯಕ್ಷತೆಯಲ್ಲಿ ನಡೆದಿತ್ತು.

4) ಹರಪನಹಳ್ಳಿಯಲ್ಲಿ 1947 ರಲ್ಲಿ ಸಿ.ಕೆ.ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

5) 11 ವರ್ಷಗಳ ನಂತರ 1958 ರ ಜ. 18 ರಿಂದ 20 ರ ವರೆಗೆ ವಿನಾಯಕ್ ಕೃಷ್ಣ ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ನಗರದ ಮುನ್ಸಿಪಲ್ ಕಾಲೇಜು ಮೈದಾನದಲ್ಲಿ 5 ನೇ ಬಾರಿಗೆ ನಡೆಯಿತು.

6) ಈಗ 67 ವರ್ಷದ ಬಳಿಕ ಮರಳಿ ಸಾಹಿತ್ಯ ಸಮ್ಮೇಳನದ ಆತಿಥ್ಯ ದೊರೆತಿದೆ. 2025 ರ ಡಿಸೆಂಬರ್ ಮಾಹೆಯಲ್ಲಿ ಆಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ ಎಂದು ತಿಳಿಸಿದರು.

ಜಿಲ್ಲೆಯ ಶಾಲಾ-ಕಾಲೇಜುಗಳಿಗೆ ಭೇಟಿ ನೀಡುತ್ತಿರುವ ಪರಿಷತ್ತಿನ ಪದಾಧಿಕಾರಿಗಳು, ವಿದ್ಯಾರ್ಥಿಗಳಿಗೆ ಸಮ್ಮೇಳನ ಕುರಿತು ಮನವರಿಕೆ ಮಾಡಿಕೊಡುವ ಮೂಲಕ ಸಮ್ಮೇಳನದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಬಳ್ಳಾರಿಯಲ್ಲಿ ಆಯೋಜಿಸಲಾಗುತ್ತಿರುವ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಳ್ಳಾರಿ ಜಿಲ್ಲೆಯ ಮೊದಲ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಸರ್ ಥಾಮಸ್ ಮುನ್ರೋ >> 4

# ಸುರಿದ ಮಳೆಯಲ್ಲೇ ರೇಷ್ಮೆ ಮನೆಗೆ ಸಿಡಿಲು, ಬೆಂಕಿಗೆ ಭಾದೆ ಭಸ್ಮ

■ ಹಂಪಿ ಟೈಮ್ಸ್ ಕೂಡ್ಲಿಗಿ

ತಾಲೂಕಿನ ಚಂದ್ರಶೇಖರಪುರ ಗ್ರಾಮದಲ್ಲಿ ಮಂಗಳವಾರ 15 ನಿಮಿಷ ,ಸುರಿದ ಮಳೆಯಲ್ಲಿಯೇ ಭಾದೆಯಿರುವ ರೇಷ್ಮೆ ಮನೆಗೆ ಸಿಡಿಲು ಬಡೆದು ಬೆಂಕಿ ಹತ್ತಿ ಉರಿದು ಭಸ್ಮವಾಗಿದೆ.

ರೇಷ್ಮೆ ಮನೆ ರೈತ ಡಿ. ವೀರಣ್ಣ ತಂದೆ ಮೊಳ್ಳಪ್ಪ ಇವರಿಗೆ ಸೇರಿದ್ದಾಗಿದೆ. ಅಂದಾಜು



ವೆಚ್ಚ 6 ರಿಂದ 7 ಲಕ್ಷ ರೂ. ಮೌಲ್ಯದ ರೇಷ್ಮೇ ನಷ್ಟವಾಗಿದೇ ಎಂದು ರೈತ ಹೇಳಿದ್ದಾನೆ. ಸ್ಥಳಕ್ಕೆ ಆಗಮಿಸಿದ ಅಗ್ನಿ ಶಾಮಕ ಠಾಣಾಧಿಕಾರಿ ಶರಣಬಸವ ರೆಡ್ಡಿ ನೇತೃತ್ವದ ಸಿಬ್ಬಂದಿ ಬೆಂಕಿ ನಂದಿಸಿದರು. .ಸ್ಥಳಕ್ಕೆ ರೇಷ್ಮೆ ಇಲಾಖೆಯ ಅಧಿಕಾರಿಗಳು ಮತ್ತು ಗುಡೇಕೋಟೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.




# ಲಾರಿ ಮುಷ್ಕರ ಕೈಬಿಡುವಂತೆ ಸಿಎಂ ಸಿದ್ದರಾಮಯ್ಯ ಮನವಿ



■ **ಹಂಪಿ ಟೈಮ್ಸ್ ಹೊಸಪೇಟೆ**

ಮುಖ್ಯಮಂತ್ರಿ ಅವರು ಇಂದು ಕಾವೇರಿಯಲ್ಲಿ ಮುಷ್ಕರ ನಿರತ ಲಾರಿ ಮಾಲಿಕರ ಸಂಘದ ಪ್ರತಿನಿಧಿಗಳೊಂದಿಗೆ ನಡೆಸಿದ ಸಭೆಯ ಮುಖ್ಯಾಂಶಗಳು:

■ ಈ ಬಾರಿ ಬಜೆಟ್ನಲ್ಲಿ ಡಿಸೇಲ್ ಮೇಲಿನ ಸುಂಕ ರೂ.2 ಹೆಚ್ಚಳ ಮಾಡಲಾಗಿದೆ. ಆದರೆ ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಡಿಸೇಲ್ ದರ ನಮ್ಮ ರಾಜ್ಯದಲ್ಲಿ ಕಡಿಮೆಯಿದೆ. ಸಾರ್ವಜನಿಕರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಮುಷ್ಕರವನ್ನು ಕೈಬಿಡುವಂತೆ ಮುಖ್ಯಮಂತ್ರಿ ಅವರು ಮನವಿ ಮಾಡಿದರು.

■ ಲಾರಿ ಮಾಲಿಕರ ಸಂಘದ ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ಅರಿವಿದೆ. ಸರ್ಕಾರ ಬಡವರ ಪರವಾಗಿದ್ದು ಸರ್ಕಾರದೊಂದಿಗೆ ಲಾರಿ ಮಾಲಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು.

■ ರಸ್ತೆಗಳ ಸುಧಾರಣೆಗೆ ರಾಜ್ಯ ಸರ್ಕಾರ ಪ್ರತಿ ವರ್ಷ ಸುಮಾರು 14 ಸಾವಿರ ಕೋಟಿ ರೂ. ವೆಚ್ಚ ಮಾಡುತ್ತಿದೆ. 83 ಸಾವಿರ ಕೋಟಿ ರೂ. ಈ ವರ್ಷ ಬಂಡವಾಳ ವೆಚ್ಚಕ್ಕೆ ಮೀಸಲಿರಿಸಲಾಗಿದೆ.

■ ಸಂಚಾರಿ ದಟ್ಟಣೆ ಅವಧಿಯಲ್ಲಿ ನಗರದ ಒಳಗೆ ಲಾರಿಗಳು ಪ್ರವೇಶಿಸುವುದರ ಬಗ್ಗೆ ಇರುವ ನಿರ್ಬಂಧ ತೆರವು ಸೇರಿದಂತೆ ಇತರ ಬೇಡಿಕೆಗಳ ಬಗ್ಗೆ ಪರಿಶೀಲನೆ ನಡೆಸಲಾಗುವುದು. ಈ ಕುರಿತಾಗಿ ಇನ್ನೊಮ್ಮೆ ಲಾರಿ ಮಾಲಿಕರ ಸಂಘದೊಂದಿಗೆ ಸಭೆ ನಡೆಸಲಾಗುವುದು ಎಂದರು.

ಗೃಹ ಸಚಿವ ಜಿ.ಪರಮೇಶ್ವರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಲಾರಿ ಮಾಲಿಕರ ಸಂಘದ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.



**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಬೇಡಿಕೆಗಳ ಕುರಿತಾಗಿ ಜಂಟಿ ಕ್ರಿಯಾ ಸಮಿತಿ ಪ್ರತಿನಿಧಿಗಳೊಂದಿಗೆ ಮಂಗಳವಾರ ಸಭೆ ನಡೆಸಿದರು. ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಕಾರ್ಮಿಕ ಮುಖಂಡರು, ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಸರ್ವಜ್ಞರ ತ್ರಿಪದಿಗಳಲ್ಲಿ ಮಾತಿನ ಮಹತ್ವ

ಮಾತೆಂಬುದು ಜ್ಯೋತಿರ್ಲಿಂಗ", "ನುಡಿದರೆ ಮುತ್ತಿನ ಹಾರದಂತಿರಬೇಕು", ಇವು ಶರಣರು ಮಾತಿನ ಬಗ್ಗೆ ಹೇಳಿರುವ "ನುಡಿಮುತ್ತುಗಳು", "ಮಾತೇ ಮುತ್ತು,ಮಾತೇ ಮೃತ್ಯು", "ಮಾತು ಬೆಳ್ಳಿ ಮೌನ ಬಂಗಾರ" ಇವು ಜನಸಾಮಾನ್ಯರು ಮಾತಿನ ಬಗೆಗೆ ಆಡಿರುವ ವೇದಾಂತಗಳು. "ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು", "ಮಾತು ಬಲ್ಲವನಿಗೆ ಜಗಳವಿಲ್ಲ" ಎಂಬುದು ನಮ್ಮ ಜನಪದ ಕವಿಯ ನೀತಿ. "ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ","ಮಾತು ಬಲ್ಲಾತಂಗೆ ಮಾತದುವು ಮಾಣಿಕವು "

ಎಂಬುದು ಸರ್ವಜ್ಞರ ದೃಷ್ಟಿಕೋನ. ಮೇಲಿನ ಎಲ್ಲಾ "ನೀತಿ ಮಾತುಗಳು" ಕೂಡ ಮಾತು ತುಂಬಾ "ಮಹತ್ವದ್ದು," ಅದು "ಸಂಪತ್ತು" ಎಂಬುದನ್ನ ಸಾರಿ ಸಾರಿ ಹೇಳುತ್ತಿವೆ.

ಸಕಲ ಜೀವರಾಶಿಗಳಲ್ಲಿ ಮಾತು ಬಲ್ಲವನು ಮನುಷ್ಯ ಮಾತ್ರ. ಆತ ತನ್ನ ಭಾವನೆಗಳನ್ನು ಅಭಿವ್ಯಕ್ತಿಸಲು ಇರುವ ಪ್ರಮುಖ ಮಾಧ್ಯಮ ಮಾತು. ಈ ಮಾತು ಮನುಷ್ಯನಿಗೆ ದೊರೆತಿರುವ ಅತ್ಯಮೂಲ್ಯ ಸಂಪತ್ತು. ಇಂತಹ ಸಂಪತ್ತನ್ನ ಅತಿ ಜತನದಿಂದ ಹೇಗೆ ಬಳಸಬೇಕು, ತನ್ಮೂಲಕ ಗೌರವ ಸಂಪಾದನೆಗಳನ್ನು ಹೇಗೆ ಹೆಚ್ಚಿಸಿಕೊಳ್ಳಬೇಕು ಎಂಬುದನ್ನು, ಮತ್ತು ತಪ್ಪಾಗಿ ಆಡಿದ ಮಾತುಗಳು ಎಂತೆಲ್ಲ ತಾಪತ್ರಯಗಳನ್ನು ತರಬಲ್ಲುವು ಎಂಬುದನ್ನು ಸರ್ವಜ್ಞರು ತಮ್ಮ ತ್ರಿಪದಿಗಳಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಸರ್ವಜ್ಞರ ಮಾತಿನ ಬಗೆಗಿನ ಕೆಲವು ತ್ರಿಪದಿಗಳನ್ನು ನಾವು ನೋಡುವುದಾದರೆ,

**1. "ರಸಿಕ ನಾಡಿದ ಮಾತು ಶಶಿಯುದಿಸಿ ಬಂದಂತೆ, ರಸಿಕ ನಲ್ಲದವನ ಬರೀ ಮಾತು ಕಿವಿಯೊಳಗೆ ಕೂರ್ದಸಿಯ ಬಡಿದಂತೆ ಸರ್ವಜ್ಞ".**

ಶಶಿ ಎಂದರೆ ಚಂದ್ರ. ಚಂದ್ರನ ಬೆಳದಿಂಗಳು ಸರ್ವರಿಗೂ ಸಂತಸವನ್ನು, ಸಮಾಧಾನವನ್ನು ಉಂಟುಮಾಡುವಂಥದ್ದು. ಇಂತಹ ಚಂದ್ರಾಗಮನದಿಂದ ಸಕಲರಿಗೂ ಹೇಗೆ ಸಂತಸ, ಆನಂದವೋ,ಹಾಗೆಯೇ ರಸಿಕನು ಅಂದರೆ ಮಾತನ್ನು ರಸವತ್ತಾಗಿ ಆಡಲು ಬಲ್ಲಾತನು ಆಡುವ ಪ್ರತಿ ಮಾತು ಹಿತಕರವೆನಿಸುತ್ತದೆ. ಹಾಗೆಯೇ ಮಾತಿನ ರಸವತ್ತತೆಯನ್ನು ಅರಿಯದ ರಸಿಕನಲ್ಲದವನು ಮಾತನಾಡಿದರೆ ಕಿವಿಯೊಳಗೆ ಚೂಪಾದ ಗೂಟವನ್ನು ಬಡಿದಂತೆ ಕೇಳಲು ಅಹಿತವಾಗಿರುತ್ತದೆ. ಕೆಲವರು ಮಾತನಾಡಿದರೆ ಇನ್ನೂ ಸ್ವಲ್ಪ ಹೊತ್ತು ಕೇಳಬೇಕು, "ಮುತ್ತಿನಂಗ ಮಾತಾಡ್ತಾನಂತ" ಅನ್ನುತ್ತೆ, ಕೆಲವು ಮೂರ್ಖರು ಮಾತನಾಡಿದರೆ ಯಾವಾಗ ಮಾತನ್ನು ನಿಲ್ಲಿಸುವರೋ ಎಂದೆನಿಸಿಬಿಡುತ್ತದೆ ಮತ್ತು ಅವರು ಆಡುವ ಮಾತುಗಳು ಮನಗಳನ್ನು ಕೆರಳಿಸುತ್ತವೆ. ಹೀಗಾಗಿ ನಮ್ಮ ಮಾತು ಶಶಿಯ ಉದಯದಂತೆ ಶಾಂತವಾಗಿ ಇರಬೇಕೆಂಬುದು ಸರ್ವಜ್ಞರ ಈ ತ್ರಿಪದಿಯ ತಿರುಳಾಗಿದೆ.



ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು, ಕೂಡ್ಲಿಗಿ

Scan For Digital Colourful
HAMPI TIMES E-paper

**2. ಮಾತು ಬಲ್ಲಹ ತಾನು ಸೋತು ಹೋಹುದು ಲೇಸು, ಮಾತಿಗೆ ಮಾತು ಮತಿಸಲ್ಕೆ ವಿಧಿ ಬಂದು ಆತುಕೊಂಡಿಹುದು ಸರ್ವಜ್ಞ...**



ಮಾತು ಬೆಳ್ಳಿ ಮೌನ ಬಂಗಾರ,, ಮಾತೇ ಮುತ್ತು, ಮಾತೇ ಮೃತ್ಯು...ಎಂಬ ಮಾತುಗಳು ಸರ್ವಜ್ಞರ ಮೇಲಿನ ತ್ರಿಪದಿಗೆ ಸಂವಾದಿಯಾಗಿವೆ. "ಮಾತು ಬಲ್ಲವನಿಗೆ ಜಗಳವಿಲ್ಲ" ಎಂಬ ಜನಸಾಮಾನ್ಯರ ವೇದವೂ ಸಹ ಮಾತನ್ನು ಯಾವ ರೀತಿ ಬಳಸಬೇಕು ಯಾವಾಗ ಬಳಸಬೇಕು ಎಂದು ಸೂಚಿಸುತ್ತದೆ. ಮೊಂಡವಾದ ಮಾಡುವುದಕ್ಕಿಂತ ಅಂತಹ ಸನ್ನಿವೇಶದಿಂದ ಹೊರ ಹೋಗುವುದೇ ಲೇಸು. ಮೂರ್ಖರೊಂದಿಗೆ,ಮೊಂಡರೊಂದಿಗೆ ವಾದಿಸುವುದಕ್ಕಿಂತ, ಮೌನವಾಗಿದ್ದು ಸುಖಾ ಸುಮ್ಮನೆ ಎದುರಾಗಬಹುದಾದ ಆಪತ್ತುಗಳಿಂದ ಪಾರಾಗುವುದೇ ಮೇಲು ಎಂಬುದು ಸರ್ವಜ್ಞರ ಈ ತ್ರಿಪದಿಯ ಒಟ್ಟು ತಿರುಳಾಗಿದೆ.

**3. ಮಾತು ಬಲ್ಲಾತಂಗೆ ಯಾತವದು ಸುರಿದಂತೆ, ಮಾತಾಡಲರಿಯದಾತಂಗೆ ಬರೀ ಯಾತ ನೇತಾಡಿದಂತೆ ಸರ್ವಜ್ಞ.**

ಇಲ್ಲಿ ಯಾತ ಎಂದರೆ ನೀರನ್ನು ಮೇಲಕ್ಕೆತ್ತಲು ಬಳಸುವ ಸಾಧನ ( ಏತ )ಎಂದರ್ಥ. ಮಾತಿನ ಸರಿಯಾದ ಮಹತ್ವವನ್ನು ತಿಳಿದು ಆಡುವುದು,ಏತದಿಂದ ನೀರನ್ನು ತೆಗೆದು ಹೊಲಗದ್ದೆಗಳಿಗೆ ಹಾಯಿಸಿದಾಗ ಹೇಗೆ ಬೆಳೆಗಳು ಬೆಳವಣಿಗೆ ಹೊಂದಲು ಸಹಾಯಕವೋ,ಹಾಗೆ. ಮಾತನಾಡಲ ರಿಯದಾತನು ಏತವಿದ್ದು, ನೀರನೆತ್ತದೇ ಸುಮ್ಮನೆ ನೇತಾಡಿದರೆ ಹೇಗೆ ನಿರರ್ಥಕವೋ ಹಾಗೆ.

ಕೆಲವರು ಆಡುವ ಮಾತುಗಳು ಸಕಲರನ್ನು ಆಕರ್ಷಿಸಿ ಮನಸ್ಸುಗಳನ್ನು ಅರಳಿಸಿ ಸಾರ್ಥಕ ಗೊಳ್ಳುತ್ತವೆ. ಉದಾಹರಣೆಗೆ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಮಾತು. ಕೆಲವರ ಮಾತುಗಳು ತೌಡುಕುಟ್ಟಿದಂತೆ ವ್ಯರ್ಥವಾಗಿ ಯಾವುದೇ ಪ್ರಯೋಜನಕ್ಕೂ ಬರುವುದಿಲ್ಲ ಎಂಬುದು ಈ ತ್ರಿಪದಿಯ ತಿರುಳಾಗಿದೆ.

**4. ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು, ಮಾತ ತಾನರಿಯದಾ ತಂಗೆ ಮಾಣಿಕವು ತೂತು ಬಿದ್ದಂತೆ ಸರ್ವಜ್ಞ.**

ಮಾಣಿಕ್ಯವು ಬೆಲೆಯುಳ್ಳ ಹರಳಾಗಿದೆ. ಇದಕ್ಕಿಂತಲೂ ಬೆಲೆಯುಳ್ಳದ್ದು ಮಾತು. ಹಾಗಾಗಿ ಇದನ್ನು ತುಂಬಾ ಮೌಲ್ಯಯುತವಾಗಿ ಬಳಸಬೇಕು. ಬೆಲೆಯುಳ್ಳ ಮಾಣಿಕಕ್ಕೆ ತೂತು ಬಿದ್ದಾಗ ಹೇಗೆ ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತೋ, ಹಾಗೆಯೇ ಮಾತಿನ ಮಹತ್ವ. ಮೌಲ್ಯವನ್ನು ಅರಿಯದೆ ಆಡಿದಾಗ ಆ ಮಾತು "ಮೌಲ್ಯದ ಮಾರುಕಟ್ಟೆ"ಯಲ್ಲಿ "ಅಪಮೌಲ್ಯ"ಗೊಳ್ಳುತ್ತದೆ. ಮುಕ್ಕಾಗದ ಮಾಣಿಕ್ಯಕ್ಕೆ ಬೆಲೆ ಜಾಸ್ತಿ. ಮುಕ್ಕಾದ ಮಾಣಿಕ್ಯಕ್ಕೆ ಬೆಲೆ ಶೂನ್ಯ. ಹಿತವಾದ ಮಾತಿಗೆ ಮೌಲ್ಯವು, ಅಹಿತವಾದ ಮಾತಿಗೆ ಬೆಲೆ ಇಲ್ಲ ಎಂಬುದು ಈ ತ್ರಿಪದಿಯ ಒಳಾರ್ಥ.

**5. ಮಾತಿಂಗೆ ಮಾತುಗಳು ಓತು ಸಾಸಿರವುಂಟು, ಮಾತಾಡಿದಂತೆ ನಡೆದಂಗೆ ಕೈಲಾಸ ಕಾತನೇ ಒಡೆಯ ಸರ್ವಜ್ಞ.**

"ನುಡಿದಂತೆ ನಡೆ ಇದೇ ಜನ್ಮ ಕಡೆ", ಆಡಿದ ಮಾತಿನಂತೆ ನಡೆಯುವುದೇ ಅತ್ಯಂತ ಶ್ರೇಷ್ಠ. ಮಾತಿಗೆ ತಪ್ಪಿ ನಡೆಯಬೇಡ ಎಂಬ ನೀತಿ ಈ ವಚನದಲ್ಲಿದೆ. ನಾವು ಮಾತಿಗೆ ಮಾತುಗಳ ಪೋಣಿಸುತ್ತಾ ಆಡಬಲ್ಲ ಮಾತಿನ ಮಲ್ಲರಾಗಿರಬಹುದು. ಆದರೆ ಆಡುವ ಮಾತಿನಂತೆ ನಡೆಯದಿದ್ದರೆ ಮಾತಿಗೂ ಬೆಲೆ ಇಲ್ಲ,ಆಡಿದಾತನಿಗೂ ನೆಲೆ ಇಲ್ಲ. "ನುಡಿಯೊಳಗಾಗಿ ನಡೆಯದಿರ್ದಡೆ ಕೂಡಲಸಂಗಯ್ಯ ನೆಂತೊಲಿವನಯ್ಯ" ಎಂಬ ಶರಣರ ನುಡಿ, ನಾವಾಡುವ ಉತ್ತಮ ನುಡಿಗಳು,ನಡೆವ ನಡೆಗಳು ನಮ್ಮನ್ನು ದೈವತ್ವದ ಸಾಮೀಪ್ಯಕ್ಕೆ ಒಯ್ಯಬಲ್ಲವಾಗಿವೆ ಎಂಬುದು ಈ ತ್ರಿಪದಿಯ ತಿರುಳಾಗಿದೆ.

**6. ಹೊತ್ತಿಗೊದಗಿದ ಮಾತು ಸತ್ತವನು ಎದ್ದಂತೆ, ಹೊತ್ತಾಗಿ ನುಡಿದ ಮಾತು ಕೈಜಾರಿದ ಮುತ್ತಿನಂತಹುದು ಸರ್ವಜ್ಞ.**

ಸಕಾಲಕ್ಕೆ ಆಡುವ ಮಾತಿಗೆ ಮೌಲ್ಯ ಜಾಸ್ತಿ. ಅದು ಎಂತಹ ಸಂತಸವನ್ನು ಉಂಟು ಮಾಡುತ್ತದೆಂದರೆ ಸತ್ತವನು ಎದ್ದು ಬಂದರೆ ಆಗುವಷ್ಟೂ. ಹೊತ್ತು ಮೀರಿ ಅಂದರೆ ಸಮಯಕ್ಕೆ ಸರಿಯಾಗಿ ಆಡದ ಮಾತು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಯಾರೋ ಒಬ್ಬರು ಒಳ್ಳೆಯವರ ಮೇಲೆ ವೃಥಾ ಆರೋಪ ಮಾಡುವುದನ್ನು ಸುಮ್ಮನೆ ಕೇಳಿಸಿಕೊಳ್ಳುವುದು ತಪ್ಪು. ಅದೇ ಸಮಯಕ್ಕೆ ಸಕಾರಣದ ಮರು ಉತ್ತರ ಕೊಟ್ಟರೆ ಆ ಮಾತಿಗೆ ಮೌಲ್ಯ ಜಾಸ್ತಿ.

**7. ಮಾತಿನಿಂ ನಗೆ ನುಡಿಯು ಮಾತಿನಿಂ ಹಗೆ ಕೊಲೆಯು ಮಾತಿನಂ ಸರ್ವಸಂಪದವು ಲೋಕಕ್ಕೆ ಮಾತೇ ಮಾಣಿಕವು ಸರ್ವಜ್ಞ...**

ಮಾತೆ ಮುತ್ತು ಮಾತೆ ಮೃತ್ಯು ಎಂಬ ಗಾದೆಯಂತೆ, ಒಳ್ಳೆಯ ಮಾತಿನಿಂದ ನಮ್ಮೆದುರು ಇರುವ ಯಾರ ಮನಸ್ಸನ್ನಾದರೂ ಗೆಲ್ಲಬಹುದು, ತನ್ಮೂಲಕ ಮಧುರ ಬಾಂಧವ್ಯಗಳನ್ನು ವೃದ್ಧಿಸಿಕೊಳ್ಳಬಹುದು, ಹಾಗೆಯೇ ಸಾಮರಸ್ಯದಿಂದ ಬಾಳಬಹುದು.

ಅದೇ ಮಾತನ್ನು ಎಚ್ಚರವಿಲ್ಲದೆ ತಪ್ಪಾಗಿ ಆಡಿದಾಗ, ನಮ್ಮ ಹಳ್ಳಿ ಜನರು ಹೇಳುವ ಹಾಗೆ, "ಪೆಟ್ಟಂಚಿನ ಮಾತಿನಿಂದ", ಅನಗತ್ಯ ಹಗೆ ದ್ವೇಷಗಳು, ಕೊಲೆಗಳು ಆಗಬಹುದು. ವಿವೇಚನಾಯುಕ್ತ ಮಾತಿನಿಂದ ಗೌರವವೆಂಬ ಸಂಪತ್ತನ್ನು, ಸಕಲರ ಪ್ರೀತಿಯನ್ನು ಪಡೆಯಬಹುದು. ಮಾತು ಮಾಣಿಕ್ಯದಷ್ಟೇ ಮೌಲ್ಯವುಳ್ಳದ್ದು ಅದನ್ನು ಜತನದಿಂದ ಬಳಸೋಣ ಎಂಬುದು ಈ ತ್ರಿಪದಿಯ ನೀತಿಯಾಗಿದೆ.

ಸರ್ವಜ್ಞ ಲೋಕ ಸಂಚಾರಿ, ಸರ್ವರೊಳಗೂ ಒಂದೊಂದು ನುಡಿಯನ್ನು ಕಲಿತು ಜ್ಞಾನಿಯಾದಾತ. ಹೀಗಾಗಿ ಆತನು ತನ್ನ ಲೋಕಜ್ಞಾನದಿಂದ ಪಡೆದ ಒಟ್ಟೂ ಜ್ಞಾನವನ್ನು ಬಳಸಿ ಮಾತಿನ ಮಹತ್ತನ್ನು ಅತ್ಯಂತ ಅಚ್ಚುಕಟ್ಟಾಗಿ ಸೂಕ್ತ ಉಪಮೇಗಳ ಮೂಲಕ ಚಿತ್ರಿಸುವಲ್ಲಿ ಸಫಲನಾಗಿದ್ದಾನೆ. ಆತನ ತ್ರಿಪದಿಗಳಲ್ಲಿನ ಮಾತಿನ ಮಹತ್ತನ್ನು ಅರಿತು ನಾವೆಲ್ಲ ಮಾತನಾಡೋಣ ಏನಂತೀರಾ?

"ಅಂದಂಗ ಮಾತು ಮನಗಳನ್ನು ಕೆಡಿಸುವುದು ಬೇಡ, ಮನಗಳನ್ನು ಕೂಡಿಸುವಂತಾಗಲಿ"

# ಕಂಡಿದ್ದ ಕೊಳ್ಳಲು ಹಂಬಲಿಸಿದೆ ಮನ

■ **ಭೋಜರಾಜ ಸೊಪ್ಪಿಮಠ ಕೊಪ್ಪಳ**



ಮಧ್ಯಮ ವರ್ಗದ ಅದರಲ್ಲೂ ಅಗತ್ಯಕ್ಕಿಂತ ತುಸು ಹೆಚ್ಚು ಹಣ ಮತ್ತು ಸಂಪಾದನೆ ಇರುವ ಜನರಲ್ಲಿ ಇತ್ತೀಚಿಗೆ ಬೆಳೆದು ಬಂದ ಒಂದು ಟ್ರೆಂಡ್ ಏನೆಂದರೆ ಶಾಪಿಂಗ್. ಸಾಯಂಕಾಲವಾಯಿತೆಂದರೆ ಸಾಕು. ಚನ್ನಾಗಿ ಮೇಕಪ್ ಮಾಡಿ ಬಗಲಿಗೊಂದು ಕ್ಯಾಶ್ ಬ್ಯಾಗ್ ಹಾಕಿಕೊಂಡು ಮಾಲ್‌ಗಳಿಗೆ ಹೊರಟು ಬಿಡುತ್ತಾರೆ. ಅಗತ್ಯವಿರಲಿ ಬಿಡಲಿ ಬೇಕೆನ್ನಿಸಿದರೆ ಸಾಕು ಕೊಂಡುಕೊಳ್ಳುವುದು. ಮನೆಗೆ ಬರುವಾಗ ಎರಡೂ ಕೈತುಂಬಾ ಬ್ಯಾಗ್‌ಗಳನ್ನು ಹಿಡಿದುಕೊಂಡು ಬಂದರೆ ಅದರಲ್ಲಿ ಸಿಗುವ ಮಜಾನೇ ಬೇರೆ. ಯಾವುದೇ ವಸ್ತುವನ್ನು ನಮ್ಮ ಯಹಿರಿಯರು ಸಮರ್ಥವಾಗಿ ಬಳಸಿಕೊಳ್ಳುತಿದ್ದರು. ಅದು ನಿರರ್ಥಕ ಎನಿಸಿದಾಗ ಮಾತ್ರ ಅದನ್ನು ಬಿಟ್ಟು ಬೇರೆಯದನ್ನು ತೆಗೆಯುತಿದ್ದರು. ಆದರೆ ಈಗ ಕಾಲ ಬದಲಾಗಿದೆ. ಹೆಚ್ಚು ಹೆಚ್ಚು ಕೊಳ್ಳಬೇಕು ಎಂಬ ಮನೋಭಾವ ಬೆಳೆದುಬಿಟ್ಟಿದೆ.

ಹಿಂದೆಲ್ಲಾ ಒಂದು ನೋಟ್‌ಬುಕ್‌ನ ಮೊದಲ ಪುಟದಿಂದ ಕೊನೆಯ ಪುಟದ ಕೊನೆಯ ಸಾಲಿನವರೆಗೆ ಎಲ್ಲೂ ಉಳಿಯದಂತೆ ಬಳಕೆ ಮಾಡಿಕೊಳ್ಳುತಿದ್ದೆವು. ಯಾವುದೇ ಬಟ್ಟೆಯನ್ನು ಅದಿನ್ನು ಸಾಕು ತುಂಬಾ ಹರಿದಿದೆ ಎಂದು ಮನೆಯಲ್ಲಿ ಹಿರಿಯರು ಹೇಳುವವರೆಗೂ ಧರಿಸುತಿದ್ದೆವು. ಯಾವುದನ್ನೂ ನಿರರ್ಥಕ ಆಗಲಿಲ್ಲ. ಈಗ ಸ್ಥಿತಿ ಬದಲಾಗಿದೆ. ಕೊಳ್ಳುಬಾಕತನ ಸಾರ್ವತ್ರಿಕ ಪಿಡುಗಾಗಿದೆ. ಕಂಡಿದ್ದನ್ನೆಲ್ಲ ಕೊಳ್ಳಬೇಕೆಂಬ ದಾಹ. ಬೇಕೋ ಬೇಡವೋ ಒಟ್ಟಿನಲ್ಲಿ ಕೊಳ್ಳಬೇಕು. ಅದರ ಬಗ್ಗೆ ವಿಚಾರಿಸುವ ತಾಳ್ಮೆಯೂ ಇಲ್ಲ. ಗುಂಪಾಗಿ ಹೋದಾಗ ಈ ಸಮಸ್ಯೆ ಕಂಟ್ರೋಲ್‌ನಲ್ಲಿ ಇಡಲು ಅಸಾಧ್ಯ. ಈ ರೀತಿಯ ಕೊಳ್ಳುಬಾಕತನಕ್ಕೆ ಕೆಲವು ಕಾರಣಗಳನ್ನು ಪಟ್ಟಿ ಮಾಡಬಹುದು.

■ ಆರ್ಥಿಕ ಸದೃಢತೆ ಅಗತ್ಯಕ್ಕಿಂತ ಹೆಚ್ಚಿನ ಸಂಪಾದನೆ ಮತ್ತು ಸ್ವಾವಲಂಬನೆ.
■ ಪಕ್ಕದವರ, ಪರಿಚಯಸ್ಥರ, ಸಂಬಂಧಿಗಳ ಮನೆಯಲ್ಲಿ ಇದೆ. ಹಾಗಾಗಿ ನಮಗೂ ಅದು ಬೇಕು ಎಂಬ ಹಠಮಾರಿ ಮನೋಭಾವನೆ.
■ ಅವರು ಕೊಳ್ಳುತಿದ್ದಾರೆ. ನಾನೂ ಖರೀದಿಸದಿದ್ದಲ್ಲಿ ಜಿಪುಣ ಎಂದು ತಿಳಿಯುವರೇನೋ ಎಂಬ ಕೀಳರಿಮೆ.
■ ನಮ್ಮಲ್ಲಿ ಇಲ್ಲದಿದ್ದರೆ ನಾಗರೀಕತೆ ಇಲ್ಲ ಎಂಬ ಭಾವನೆ ಬೇರೆಯವರಲ್ಲಿ ಬರಬಹುದೆಂಬ ಅಸಂಬದ್ಧ ನಂಬಿಕೆ.
■ ಅವರಿಗೆ ಶಾಪಿಂಗ್‌ನ ಕ್ರೇಜ್ ಎಂಬ ಹಣೆಪಟ್ಟಿ ಪಡೆದುಕೊಳ್ಳೋ ಆತುರ.
■ ಇದ್ದರೆ ಇರಲಿ ಮುಂದೆ ಉಪಯೋಗಕ್ಕೆ ಬಂದೀತು ಎಂಬ ಮುಂದಾಲೋಚನೆ.
■ ಅದನ್ನೇಕೆ ತರಲು ಹೋದೆ? ಎಂದು ಮನೆಯಲ್ಲಿ ಯಾರೂ ಕೇಳುವದಿಲ್ಲ ಎಂಬ ನಿಶ್ಚಿಂತೆ.

**ಹಾಗಾದರೆ ಈ ಕೊಳ್ಳುಬಾಕುತನವನ್ನು ಕಡಿಮೆ ಮಾಡಲು ಏನು ಮಾಡಬಹುದು.**



■ ಅಗತ್ಯವಿದ್ದರೆ ಮಾತ್ರ ಎಂಬ ಮನೋಭಾವನೆಯನ್ನು ಬೆಳಸಿಕೊಳ್ಳಿ. ಅದು ವಿಚಾರಿಸುವಂತೆ ಮಾಡುತ್ತದೆ.
■ ಶಾಪಿಂಗ್‌ಗೆಂದೇ ಹೋಗಿ. ಏನೂ ಕೊಳ್ಳದೇ ಹಾಗೆ ಬನ್ನಿ. ಕನಿಷ್ಠ ಎಷ್ಟು ಉಳಿಸಿದೆ ಎಂದು ಲೆಕ್ಕ ಹಾಕಿ. ಅದನ್ನು ಉಳಿತಾಯ ಖಾತೆಗೆ ಹಾಕಿ. ಆ ರೀತಿಯಾದರೂ ಉಳಿತಾಯಕ್ಕೆ ದಾರಿ ಮಾಡಿಕೊಡಿ.
■ ಗುಂಪಿನಲ್ಲಿದ್ದಾಗ ಶಾಪಿಂಗ್ ನನ್ನ ಕೆಲಸವಲ್ಲ ಎಂದು ಹೇಳಿಬಿಡಿ. ಮುಜುಗರ ಮತ್ತು ಶಾಪಿಂಗ್ ಎರಡನ್ನು ತಪ್ಪಿಸಿಕೊಂಡಂತೆ ಆಗುತ್ತದೆ.
■ ಎಲ್ಲಕ್ಕೂ ಮುಖ್ಯವಾಗಿ ಮನಸ್ಸಿಗೆ ಕಡಿವಾಣ ಹಾಕಿ. ಸ್ವಲ್ಪ ತಾಳ್ಮೆ ಹಾಗೂ ವಿವೇಚನೆ ಇರಲಿ. ನಮ್ಮ ಹಿರಿಯರು ಹಣಕ್ಕೆ ಕೊಡುತಿದ್ದ ಬೆಲೆ ತಿಳಿಯಿರಿ. ದುಂದು ಖರ್ಚಿಗೆ ಮಿತಿ ಹಾಕಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಅತೀ

ಅತೀ ವಿನಯಂ
ಧೂರ್ತ ಲಕ್ಷಣವಂತೆ।

ಅತೀ ಸಂಕೋಚ
ಮನುಷ್ಯ ಹಾಳಂತೆ।

ಅತೀ ಮಾತುಗಾರಿಕೆ
ಬೇಸರ ತರುವುದಂತೆ।

ಆತೀಯಾದ ಭರವಸೆ
ಕೈ ಕೊಡುವುದಂತೆ।

ಆತೀಯಾದ ಧಾರಾಳತನ
ಕಸ್ತೂರಿ ನಿವಾಸ ಸಿನೇಮಾದಂತೆ।

ಆತೀಯಾದ ಚೆಲ್ಲಾಟ
ಮಗ್ಗಲು ಮುರಿವುದಂತೆ।

ಅತೀಯಾದ ದುರಾಸೆ
ಮನಸು ಚಂಚಲವಂತೆ।

ಅತೀಯಾದ ಪ್ರೀತಿ
ನಿರಾಸೆ ಮಾಡುವುದಂತೆ।

ಅತಿಯಾಗಿ ತಿನ್ನುವುದು
ದೇಹಕ್ಕೆ ಅಜೀರ್ಣವಂತೆ।

ಅತೀಯಾದ ಮೊಬೈಲ್
ಕಣ್ಣಿಗೆ ತೊಂದರೆಯಂತೆ।

ಅತೀಯಾದದ್ದು
ಎಲ್ಲವೂ ಅಪಾಯವಂತೆ।

– ಚಂದ್ರಶೇಖರಯ್ಯ ರೋಣದಮಠ.

## ಮೈಕ್ರೋ ನ್ಯೂಸ್

### ವಿದ್ಯುತ ತಗುಲಿ ಮೃತಪಟ್ಟ ಮಕ್ಕಳ ಮನೆಗೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಭೇಟಿ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ತಾಲೂಕಿನ ಹೊಸಳ್ಳಿ ಗ್ರಾಮದಲ್ಲಿನ ಇಬ್ಬರು ಮಕ್ಕಳು ಕಾಲುವೆಯಲ್ಲಿ ಈಜಾಡಲು ತೆರಳಿ ವಿದ್ಯುತ ತಗುಲಿ ಮೃತರಾದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ಜಿ ರಾಮತ್ನಾಳ ಮೃತ ಬಾಲಕರ ಮನೆಗೆ ಬೇಟಿ ನೀಡಿ ನೊಂದ ಪಾಲಕರಿಗೆ ಸಾಂತ್ವನ ಹೇಳಿದರು.

ಹೊಸಳ್ಳಿ ಗ್ರಾಮದ ಮಕ್ಕಳು ಮೃತಪಟ್ಟ ಘಟನೆಯು ಏಪ್ರಿಲ್ 8 ರಂದು ವರದಿಯಾದ ಹಿನ್ನಲೆಯಲ್ಲಿ, ಏ.15 ರಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ಜಿ ರಾಮತ್ನಾಳ ಬಾಲಕರ ಮನೆಗೆ ಹಾಗೂ ಮಕ್ಕಳು ಮೃತಪಟ್ಟ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಕ್ಕಳ ರಕ್ಷಣೆಯ ಕುರಿತು ಚರ್ಚಿಸಿದರು.

ಸಭೆಯಲ್ಲಿ ಮಾತನಾಡಿದ ಅವರು ಮಕ್ಕಳ ಜೀವವು ಅತ್ಯಮೂಲ್ಯವಾದದ್ದು, ಮಕ್ಕಳು ತಮ್ಮ ಬೇಸಿಗೆಯ ರಜೆಯನ್ನು ಅನುಭವಿಸುವುದರೊಂದಿಗೆ ಸುರಕ್ಷಿತವಾಗಿರುವುದು ಅತ್ಯವಶ್ಯಕವಾಗಿದೆ. ಬೇಸಿಗೆ ರಜೆ ಅವಧಿಗಳು ಈಗಾಗಲೇ ಆರಂಭಗೊಂಡಿವೆ, ಮಕ್ಕಳು ರಜೆಯ ದಿನಗಳಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ ಮತ್ತು ಈಜು ಕಲಿಯಲು ಅಥವಾ ಈಜಾಡಲು ಹೋಗುವ ಸಂದರ್ಭಗಳು ಅಧಿಕವಾಗಿದ್ದು, ವಿದ್ಯುತ ಅಪಘಾತದಿಂದ ಹಾಗೂ ನೀರಿನಲ್ಲಿ ಉಸಿರುಗಟ್ಟಿ ಜೀವವನ್ನು ಕಳೆದುಕೊಳ್ಳುವ ಪ್ರಸಂಗಗಳು ಜರುಗುತ್ತಿವೆ, ಈ ರೀತಿಯ ಘಟನೆಗಳು ಮರುಕಳಿಸದಂತೆ ಮಕ್ಕಳಸ್ನೇಹಿ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದ್ದು. ಆದ್ದರಿಂದ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ನದಿ, ಕಾಲುವೆ, ಹಳ್ಳ ಮತ್ತು ಬಾವಿಗಳ ಹತ್ತಿರ "ನೀರು ಆಳವಿದೆ, ಎಚ್ಚರಿಕೆ" ಎಂಬ ಫಲಕಗಳನ್ನು ಅಳವಡಿಸುವುದು ಹಾಗೂ ಸ್ಥಳೀಯ ಜೀವರಕ್ಷಕ ಸಾಧನಗಳಾದ ನೀರಿನ ಟ್ಯೂಬ್, ಹಗ್ಗವನ್ನು ತೇಲಿಬಿಡುವುದು ಅಥವಾ ಅಳವಡಿಸುವ ಮೂಲಕ ಮಕ್ಕಳ ಹಾಗೂ ಮಾನವ ಜೀವಗಳನ್ನು ರಕ್ಷಿಸಬಹುದಾಗಿದ್ದು ಈ ಕುರಿತು ಕ್ರಮವಹಿಸುವಂತೆ ಹಾಗೂ "ಮಕ್ಕಳ ರಕ್ಷಣೆ ನಮ್ಮೆಲ್ಲರ ಮತ್ತು ಸಮುದಾಯದ ಹೊಣೆಯಾಗಿದ್ದು, ಎಲ್ಲರೂ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು

ಈ ಸಂದರ್ಭದಲ್ಲಿ ಕೊಪ್ಪಳ ತಹಶೀಲ್ದಾರ್ ವಿಠ್ಠಲ ಚೌಗಲಾ, ಕೊಪ್ಪಳ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ, ಹೊಸಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಸುರೇಶ ಛಲವಾದಿ, ಕೊಪ್ಪಳ ಪ್ರಭಾರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶರಣಪ್ಪ, ಮತ್ತಿತರರಿದ್ದರು.

# ನೀವು..ನೀವಾಗಿಯೇ ಇರಿ...ನಿಮ್ಮಂತೆ..ನೀವಾಗಿ...

ನಿನ್ನಂತೆ ನೀನಾಗು... ನಿನ್ನನ್ನು ಅರಿ ಮೊದಲು....ಚೆನ್ನೆಂದು ಅವರಿವರನ್ನು ಅನುಕರಿಸಬೇಡ...... ಬೀchi... ನಮ್ಮಂತೆ ನಾವಾಗಿರಲು ಬಿchi ಯವರು ತಮ್ಮದೇ ಆದ ಶೈಲಿಯಲ್ಲಿ ಹೇಳಿದ್ದಾರೆ.. ಅಲ್ಲವೇ..

ನೀವು ನೀವಾಗಿಯೇ ಇರಿ....ಅಯ್ಯೋ ಇದೇನಪ್ಪ ನಾವು ನಾವ ಆಗಿರದೆ ಬೇರೆಯವರಾಗಿದಿವ....? ಎಂಬ ಪ್ರಶ್ನೆ ಮೂಡಿದೆ ಅಲ್ಲವೇ...ಹೌದು ಸ್ನೇಹಿತರೆ , ಪ್ರಸ್ತುತ ಸಮಾಜದಲ್ಲಿ ನಾವು ನಾವಾಗಿ ಉಳಿದಿಲ್ಲ ಸಮಯ ಪರಿಸ್ಥಿತಿಗೆ ತಕ್ಕಂತೆ ನಾವು ಸಮಯದ ಕೈ ಗೊಂಬೆಯಾಗಿ ಜೀವನವನ್ನು ನಡೆಸುತ್ತಿದ್ದೇವೆ.ನಾವು ಬಾಳುತ್ತಿರುವುದು ನಮಗೋಸ್ಕರ ಅಲ್ಲ ಸಮಾಜದಲ್ಲಿರುವ ಜನರಿಗೋಸ್ಕರ, ನಾಲ್ಕು ಜನ ನಮ್ಮ ಬಗ್ಗೆ ನಾಲ್ಕು ಮಾತನಾಡಬಾರದು ಎಂದು ನಮ್ಮತನವನ್ನು ಬಿಟ್ಟು ನಾಟಕವಾಗಿ ವಿವಿಧ ವೇಷಗಳನ್ನು ಮುಖವಾಡಗಳನ್ನ ಹಾಕಿ ಬದುಕುತ್ತಿದ್ದೇವೆ. ನಮ್ಮತನವನ್ನು ನಾಲ್ಕು ಜನರಿಗೋಸ್ಕರ ದಾರೇ ಎರೆದಿದ್ದೇವೆ ಅಲ್ಲವೇ.....ಸ್ನೇಹಿತರೆ, ಹಾಗಾದರೆ ನಮ್ಮಂತೆ ನಾವಾಗಿರಲು ಏನು ಮಾಡೋಣ.....?

**ನೀವು ನೀವಾಗಿರಲು ನಿಮ್ಮ ವ್ಯಕ್ತಿತ್ವದ ಪಾತ್ರ.....**

ನಾವು ನಾವಾಗಿಯೇ ಇರಲು ನಮ್ಮ ವ್ಯಕ್ತಿತ್ವ ಬಹಳ ಮುಖ್ಯ... ಜಗತ್ತಿನಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ವ್ಯಕ್ತಿತ್ವವಿದೆ. ಈ ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯು ನೋಡಲು ಹೇಗೆ ಒಂದೇ ರೀತಿ ಇರದೆ ವಿಭಿನ್ನವಾಗಿರುತ್ತಾರೋ.. ಹಾಗೆ ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವವು ವಿಭಿನ್ನವಾಗಿರುತ್ತದೆ.. ವ್ಯಕ್ತಿತ್ವವೆಂದರೆ ವ್ಯಕ್ತಿಯ ರೀತಿ ನೀತಿ..ಚಿಂತನೆ.. ಆಲೋಚನೆ.. ಭಾವನೆ. ವ್ಯವಹಾರಿಕತೆ. ಅವರವರ ನಡವಳಿಕೆ. ಸಮಾಜದೊಂದಿಗಿನ ಆತನ ಸಂಬಂಧ, ಆತನ ವರ್ತನೆ. ವ್ಯಕ್ತಿಯ ಆಂತರಿಕ ಮತ್ತು ಬಾಹ್ಯ ನೋಟ ಇವೆಲ್ಲವೂ ವ್ಯಕ್ತಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ..ಇದರಲ್ಲಿ ನಾವು ನಮಗೆ ಅವರಲ್ಲಿರುವ ಇಷ್ಟವಾದ ವಿಷಯದಲ್ಲಿ ಅವರ ವ್ಯಕ್ತಿತ್ವದಿಂದ ಆಕರ್ಷಿತರಾಗುತ್ತೇವೆ..ಅವರನ್ನು ಇಷ್ಟಪಡುತ್ತೇವೆ ಅವರಂತೆ ಆಗಬೇಕು.. ಅವರಂತೆ ಇರಬೇಕು..ಎಂದು ನಾವು ಬಯಸುತ್ತೇವೆ ಆದರೆ ಅವರ ಹಾಗೆಯೇ ಅನುಕರಣೆ ಮಾಡಲು ಸಾಧ್ಯವಿಲ್ಲ....



ಡಾ ಪ್ರಸನ್ನ ನಾಡಿಗರ್
9900550684
Scan For Digital Colourful
HAMPI TIMES E-paper

ಅದು ನಮ್ಮೊಳಗಿನಿಂದಲೇ ಬರಬೇಕು.. ಆಗ ಮಾತ್ರ ಸಾಧ್ಯ. ಬಲವಂತವಾಗಿ ಅದನ್ನು ನಮ್ಮದನ್ನಾಗಿಸಲು ಸಾಧ್ಯವಿಲ್ಲ. ಆದರೆ ಇವತ್ತಿನ ಪ್ರಪಂಚದಲ್ಲಿ ಎಲ್ಲರೂ ಬೇರೆಯವರಂತೆ ನಾವಾಗಬೇಕು ಎಂದು ಬಯಸುತ್ತಾರೆ.. ಆದರೆ ಇದು ತಪ್ಪು , ಪ್ರಪಂಚದಲ್ಲಿರುವ ಪ್ರತಿ ವ್ಯಕ್ತಿಯು ತಮ್ಮದೇ ಆದ ವ್ಯಕ್ತಿತ್ವವಿದೆ. ಆ ವ್ಯಕ್ತಿತ್ವವನ್ನು ಸುಂದರಗೊಳಿಸ ಬೇಕಾಗಿದೆ, ಅವರ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಾಗಿದೆ, ಅಂದರೆ ನಾವು ಬೇರೆಯವರನ್ನು ನೋಡಿ ಹೇಗೆ ಆಕರ್ಷಿತರಾಗುತ್ತೇವೆಯೋ, ಹಾಗೆ ಬೇರೆಯವರು ನಮ್ಮ ವ್ಯಕ್ತಿತ್ವದಿಂದ ಆಕರ್ಷಿಸುವಂತೆ ನಮ್ಮ ವ್ಯಕ್ತಿತ್ವ ಶೋಭಿಸಬೇಕು. ಅವರಿಗೆ ನಮ್ಮ ವ್ಯಕ್ತಿತ್ವ ಇಷ್ಟವಾಗಬೇಕು. ನಮ್ಮ ವ್ಯಕ್ತಿತ್ವ ಹೇಗಿರಬೇಕೆಂದರೆ ನಮ್ಮಿಂದ ಬೇರೆಯವರಿಗೆ ಉಪಕಾರ ವಾಗದಿದ್ದರೂ ಸರಿ, ಅಪಾಕಾರವನ್ನು ಮಾಡದೆ ಪ್ರೀತಿ,ವಿಶ್ವಾಸ, ಸಹೋದರತೆ, ಸಹಬಾಳ್ವೆ ಸಹಕಾರದ ಭಾವನೆಗಳನ್ನು ಬಳಸಿಕೊಳ್ಳುವಂತೆ ವ್ಯಕ್ತಿತ್ವವಿರಬೇಕು. ಹಿತವಾದ ಮಾತು ಒಳ್ಳೆಯ ನಡತೆ, ಸುಸಂಸ್ಕೃತಿ ಹೊಂದಿರುವುದು ಉತ್ತಮ ಆಗಲೇ ನಮ್ಮ ವ್ಯಕ್ತಿತ್ವಕ್ಕೆ ಬೆಲೆ ಗೌರವ ಸಿಗುವುದು. ಆಗ ಎಲ್ಲರೂ ಅನುಕರಿಸಿ ಇಷ್ಟ ಪಡುವರು. ಈ ರೀತಿಯ ವ್ಯಕ್ತಿತ್ವವನ್ನ ನಾವು ನಮ್ಮಲ್ಲಿ ಬೆಳೆಸಿಕೊಂಡರೆ ಮಾತ್ರ ನಾವು ನಾವಾಗಿಯೇ ಇರಲು ಸಾಧ್ಯ ನಮ್ಮಂತೆ ನಾವಾಗಲು ಸಾಧ್ಯ.



**ನೀವು ನೀವಾಗಿರಲು ನಿಮ್ಮ ಮನಸ್ಥಿತಿಯ ಪಾತ್ರ.....**

ನಮ್ಮಂತೆ ನಾವಾಗಿರಲು ನಾವು ಏನು ಮಾಡಬೇಕು....? ಎಂಬ ಪ್ರಶ್ನೆ ಮೂಡುತ್ತಿದೆ ಅಲ್ಲವೇ..? ಬನ್ನಿ ನೋಡೋಣ.... ನಾವು ಯಾವ ಕೆಲಸ ಅತಿ ಕಷ್ಟವೆಂದು ಭಾವಿಸು ತ್ತೇವೆಯೋ, ಅಂತಹ ಕೆಲಸಗಳನ್ನೇ ನಾವು ಆಯ್ಕೆ ಮಾಡಿಕೊಂಡು ಕಾರ್ಯಪ್ರವೃತ್ತ ರಾಗಬೇಕು.. ಆಗ ಮಾತ್ರ ನಮ್ಮ ಮೇಲೆ ನಮಗೆ ಹೆಚ್ಚು ವಿಶ್ವಾಸ ಬರುತ್ತದೆ..ನಮ್ಮ ಬಗೆಗೆ ನಾವು ಊಹೆ ಮಾಡಿಕೊಳ್ಳುವುದು ಬೇಡ.ನಮಗೆ ಸಾಮರ್ಥ್ಯವಿಲ್ಲ ಎಂದು ನಾವೇ ಭಾವಿಸುವುದು ಬೇಡ. ನಮ್ಮಲ್ಲಿ ನಮಗೆ ಕೀಳರಿಮೆ ಬೇಡ,ನಮ್ಮ ನೈಜ ಸಾಮರ್ಥ್ಯವನ್ನು ಗೊತ್ತು ಪಡಿಸಿಕೊಳ್ಳುತ್ತಾ ಸಾಗಬೇಕು. ನಾವು ಸ್ಪಂದನ ಶಿಜಲರಾಗಬೇಕು... ಸಂವೇದನಾಶೀಲರಾಗಬೇಕು..

ಕ್ರಿಯಾಶೀಲರಾಗಬೇಕು ಇದರಲ್ಲಿ ನಮ್ಮ ಯಶಸ್ಸು ಅಡಗಿ ಕುಳಿತಿರುತ್ತದೆ. ಇದರಿಂದ ನಮ್ಮ ವ್ಯಕ್ತಿತ್ವವು ಬೆಳೆಯುತ್ತದೆ. ನಮ್ಮ ಮೇಲೆ ನಮಗೆ ನಂಬಿಕೆ, ವಿಶ್ವಾಸ ಬರುತ್ತದೆ. ಆದರೆ ನಾವು ಕೀಳರಿಮೆ ಎಂಬ ಭಾವನೆಯನ್ನು ಇರಿಸಿಕೊಂಡಿದ್ದೇವೆ ಇದು ಹೆಚ್ಚು ದಿನ ನಮ್ಮಲ್ಲಿ ಮನೆ ಮಾಡಿದರೆ. ಈ ಕೀಳರಿಮೆಯಂತೆ ನಮ್ಮ ವ್ಯಕ್ತಿತ್ವ ರೂಪಗೊಳ್ಳುತ್ತದೆ. ಕೀಳರಿಮೆಯನ್ನು ನಮ್ಮಿಂದ ತೊಲಗಿಸಬೇಕು. ಕೀಳರಿಮೆಯಿಂದ ಬಳಲುತ್ತಿರುವ ಮನಸ್ಸುಗಳಿಗೆ ಸ್ವಲ್ಪ ಯಶಸ್ಸೆಂಬ ತೈಲವನ್ನು ಹಚ್ಚಬೇಕು. ಅಂದರೆ ಅವರಿಗೆ ಚೈತನ್ಯ ತರುವಂತ ವಿಷಯಗಳ ಕಡೆಗೆ ಗಮನ ಕೇಂದ್ರೀಕರಿಸಬೇಕು. ಆಗ ಅವರ ವಿಶ್ವಾಸ,ನಂಬಿಕೆ ಹೆಚ್ಚಾದಂತೆ ಅವರ ವ್ಯಕ್ತಿತ್ವವು ಹೆಚ್ಚಾಗುತ್ತದೆ.ಅವರ ವ್ಯಕ್ತಿತ್ವ ಹೆಚ್ಚಾದಂತೆಲ್ಲ ಅವರು ತಾವಾಗಿಯೇ ಬೆಳೆಯಲು ಇಷ್ಟಪಡುತ್ತಾರೆ. ಆಗ ನಾವು ನಾವಾಗಿರಲು ಸಾಧ್ಯ.....

**ನೀವು ನೀವಾಗಿರಲು ದೃಢ ಮನಸ್ಕಾರಾಗಿ ....**

ನಾವು ನಾವಾಗಿರಲು ನಮ್ಮ ಮನಸ್ಸು ದೃಢವಾಗಿರಬೇಕು.. ನಾವು ಯಾವಾಗಲೂ ನೂರಕ್ಕೆ ನೂರರಷ್ಟು ಸರಿಯಾದ ರೀತಿಯೇ ಇರಬೇಕೆಂದು ಬಯಸುತ್ತೇವೆ. ಆದರೆ ಅದು ಸಾಧ್ಯವಿಲ್ಲ ಹೇಗೆ ಚಿನ್ನಕ್ಕೆ ಮತ್ತೊಂದು ಲೋಹವನ್ನು ಸೇರಿಸಿ ಆಕರ್ಷಕ ಒಡವೆಗಳನ್ನು ಮಾಡುತ್ತಾರೆ ಹಾಗೆ ಜೀವನದ ವಿಚಾರದಲ್ಲಿ ಕಷ್ಟ ನಷ್ಟಗಳಿಗೆ ಸೋಲುಗಳಿಗೆ ನೋವುಗಳಿಗೆ ಕುಗ್ಗದೆ, ಮುಂದೆ ಸಾಗಿ ಆ ಕಷ್ಟಗಳನ್ನೆಲ್ಲ ನಮ್ಮಿಂದ ದೂರ ಸರಿಸಿ ಆದುದ್ದೆಲ್ಲ ಒಳ್ಳೆಯದಕ್ಕೆ ಆಯಿತು,ಎಂದು ಸಕಾರಾತ್ಮಕವಾಗಿ ಚಿಂತಿಸಿ ಕಷ್ಟಗಳನ್ನೆಲ್ಲ ಅನುಭವ ಎಂದು ಭಾವಿಸಬೇಕು. ಅವಕಾಶಗಳು ಒದಗಿ ಬಂದಿವೆ ಎಂದುಕೊಂಡು ಸದುಪಯೋಗ ಪಡಿಸಿಕೊಳ್ಳಬೇಕು. ಟೀಕೆ – ಟಿಪ್ಪಣಿಗಳಿಗೆ ಕುಗ್ಗಬಾರದು.ಅವುಗಳನ್ನ ನಮ್ಮ ದಾರಿ ದೀಪವನ್ನಾಗಿ ಮಾಡಿಕೊಳ್ಳಬೇಕು. ನಾವು ಹೇಗಿದ್ದೇವೆ ಅಂದರೆ ಚಳಿಗಾಲ ಬಂದಾಗ ಅಯ್ಯೋ ಎಷ್ಟು ಚಳಿ ಇದು ಯಾವಾಗ ಹೋಗುತ್ತೋ....ಬೇಸಿಗೆ ಬಂದಾಗ ಎಷ್ಟೊಂದು ಬಿಸಿಲು ಇದು ಯಾವಾಗ ಹೋಗುತ್ತೋ.... ಮಳೆಗಾಲ ಬಂದಾಗ ಮಳೆ ಯಾವಾಗ ನಿಲ್ಲುತ್ತೋ.... ಎನ್ನುವ ಮನಸ್ಥಿತಿಯಲ್ಲಿ ನಾವಿದ್ದೇವೆ. ನಮ್ಮಲ್ಲಿ ದೃಢವಾದ ಮನಸ್ಸಿಲ್ಲ ಇರುವುದರಲ್ಲಿ ಇರುವುದರ ಬಗ್ಗೆ ತೃಪ್ತಿಪಟ್ಟುಕೊಂಡು. ಬಯಸಿದ್ದನ್ನ ಸಂಪಾದಿಸುತ್ತ ಸಾಗೋಣ...ಕೊರಗುವಿಕೆ ಇರುವುದು ನಮಗಲ್ಲ....! ದಿನನಿತ್ಯ ಆಗುವ ತಪ್ಪುಗಳನ್ನು ಬರೆದಿಡಿ,. ವಿಮರ್ಶಿಸಿ.. ಅದೇ ತಪ್ಪುಗಳನ್ನ ಪುನರಾವರ್ತಿಸದಿರಿ.. ಹೀಗೆ ದೃಢ ಮನಸ್ಸಿನಿಂದ ಇದ್ದಾಗ ನಾವು ನಾವಾಗಿರಲು ಸಾಧ್ಯ....

**ನೀವು ನೀವಾಗಿರಲು ಈ ಅಂಶಗಳು ಬಹಳ ಮುಖ್ಯ.....**

ನಿಮ್ಮಂತೆ ನೀವಾಗಿರಲು ಈ ಕೆಳಗಿನ ಅಂಶಗಳು ನಾವು ಗಮನದಲ್ಲಿಟ್ಟುಕೊಳ್ಳಬೇಕು

1. ನಮ್ಮನ್ನ ನಾವು ಗೌರವಿಸಿಕೊಳ್ಳಬೇಕು
2. ನಮ್ಮನ್ನ ನಾವು ಚೆನ್ನಾಗಿ ಅರಿಯಬೇಕು
3. ಹೃದಯ ವೈಶಾಲ್ಯತೆ ಬೆಳೆಸಿಕೊಳ್ಳಬೇಕು
4. ಸರಳತೆ ಸಜ್ಜನಿಕೆ ಎಂದಿಗೂ ಭೂಷಣ
5. ಅಸೂಯೆ ಅಹಂಕಾರಗಳಿಂದ ದೂರವಿರಬೇಕು
6. ಆಸೆಗಳು ನಮ್ಮ ನಿಯಂತ್ರಣದಲ್ಲಿರಬೇಕು
7. ಇತರರೊಂದಿಗೆ ಹೋಲಿಕೆ ಮಾಡಿಕೊಳ್ಳುವುದನ್ನು ಬಿಡಬೇಕು
8. ಸಕಾರಾತ್ಮಕ ಭಾವನೆಗಳನ್ನು ರೂಡಿಸಿಕೊಳ್ಳಬೇಕು
9. ನಮ್ಮ ಸಾಮರ್ಥ್ಯದ ಬಗ್ಗೆ ನಮಗೆ ನಂಬಿಕೆ ಇರಬೇಕು
10. ನಮ್ಮ ಮೇಲೆ ನಮ್ಮ ಕೆಲಸದ ಮೇಲೆ ನಮ್ಮ ಮನಸ್ಸಿನ ಮೇಲೆ ನಮಗೆ ಹೆಮ್ಮೆ ಇರಬೇಕು

**ಕೊನೆಯದಾಗಿ.....**

ಈ ಪ್ರಪಂಚದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಪ್ರತಿನಿತ್ಯ ಅನೇಕ ವೈವಿಧ್ಯಮಯವಾದ ಪಾತ್ರಗಳನ್ನ ವಹಿಸುತ್ತಾನೆ.. ಒಂದು ಕುಟುಂಬದಲ್ಲಿ ತಂದೆಗೆ ಮಗನಾಗಿ, ಮಗುವಿಗೆ ತಂದೆಯಾಗಿ, ಪತ್ನಿಗೆ ಪತಿಯಾಗಿ, ಸೋದರನಾಗಿ ನಿರ್ವಹಿಸುತ್ತಾನೆ. ಅಂಗಡಿಗೆ ತೆರಳಿದಾಗ ಗ್ರಾಹಕನಾಗಿ, ಬಸ್ಸಿನಲ್ಲಿ ಪ್ರಯಾಣಿಕನಾಗಿ, ಗುಂಪಿನಲ್ಲಿ ಸದಸ್ಯ ಅಥವಾ ನಾಯಕನಾಗಿ, ಕಚೇರಿಯಲ್ಲಿ ಉದ್ಯೋಗಿಯಾಗಿ, ಹೀಗೆ ಅನೇಕ ಪಾತ್ರಗಳನ್ನ ನಿರ್ವಹಿಸಬೇಕಾಗುತ್ತದೆ. ಇಲ್ಲಿ ಆಯಾ ಪಾತ್ರಗಳನ್ನ ನಾವು ನಾವಾಗಿಯೇ ನಿರ್ವಹಿಸಿದಾಗ ಆ ಪಾತ್ರಗಳು ಜೀವ ತುಂಬುತ್ತವೆ ಮತ್ತು ಯಶಸ್ವಿಯಾಗುತ್ತದೆ.. ಇಲ್ಲಿ ನಾವು ನಾವಾಗಿಯೇ ಇದ್ದಾಗ ನಮ್ಮ ವ್ಯಕ್ತಿತ್ವವು ವೃದ್ಧಿಸುತ್ತದೆ ಆದ್ದರಿಂದ ಪ್ರತಿಯೊಂದರಲ್ಲಿ ನಾವು ನಾವಾಗಿಯೇ ಇರೋಣ....ನಮ್ಮಂತೆ ನಾವಾಗಿಯೇ ಬಾಳೋಣ......

# ಆತ್ಮ ರಕ್ಷಣೆಗಾಗಿ ಹೋರಾಟ

■ ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ

ಕಾಮಕ್ಕೆ ಕಣ್ಣಿಲ್ಲ, ವಯಸ್ಸಿನ ಹಂಗಿಲ್ಲ, ಅರಿವಂತೂ ಮೊದಲೇ ಇಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.



ಕೇವಲ ಐದು ವರ್ಷದ ಪುಟ್ಟ ಬಾಲಕಿಯ ಮೇಲೆ ಬರ್ಬರವಾದ ಅತ್ಯಾಚಾರ ಎಸಗಿ ಆಕೆಯ ಬಾಯಿ ಮುಚ್ಚಿ ಉಸಿರುಗಟ್ಟಿಸಿ ಸಾಯಿಸಿದ ಆ ಪಾತಕಿಯ ಪೈಶಾಚಿಕ ಕೃತ್ಯಕ್ಕೆ ಧಿಕ್ಕಾರವಿರಲಿ.

ನವಮಾಸಗಳ ಕಾಲ ತನ್ನ ಉದರದಲ್ಲಿ ಹೊತ್ತು ಹೆತ್ತು ತನ್ನ ಮಗುವಿನ ಭವ್ಯ ಭವಿಷ್ಯದ ಕುರಿತು ಹಲವು ಕನಸುಗಳನ್ನು ಕಂಡ ಆ ತಾಯಿ ಮನೆಯ ಬಳಿ ಆಟವಾಡುತ್ತಿದ್ದ ತನ್ನ ಮಗು ವಿಕೃತನ ಕಾಮ ಪಿಪಾಸೆಗೆ ಬಲಿಯಾಗಿ ಹೋದಳು ಎಂಬುದನ್ನು ಕೇಳಿದಾಗ ಆಕೆಯ ಪರಿಸ್ಥಿತಿ ಏನಾಗಿರಬಹುದು. ತನ್ನ ಮಗುವನ್ನು ನೋಡ ಬಾರದ ಸ್ಥಿತಿಯಲ್ಲಿ ನೋಡಿದಾಗ ಅದೆಷ್ಟು ವಿಲವಿಲ ಒದ್ದಾಡಿರಬಹುದು ಆ ತಾಯಿಯ ಜೀವ ಎಂದು ಊಹಿಸಿಕೊಂಡರೆ ಅದೆಷ್ಟೇ ಗಟ್ಟಿ ಗುಂಡಿಗೆಯಾದರೂ ಒಂದು ಕ್ಷಣ ಝಲ್ಲೆನ್ನದೇ ಇರದು.

ಕಾನೂನಿನ ಕೈಗಳು ಅದೆಷ್ಟೇ ಉದ್ದ ಚಾಚಿದರೂ ಸಿಗದಂತೆ ತಪ್ಪಿಸಿಕೊಂಡು ಹೋಗುವ, ತಪ್ಪಿಸಿಕೊಳ್ಳಲು ಸಹಾಯ ಮಾಡುವ, ಅದೇ ಕಾನೂನಿನ ಲೋಪ ದೋಷಗಳನ್ನು ಬಳಸಿಕೊಂಡು ಪಾರಾಗಲು ಯತ್ನಿಸುವ ಅಪರಾಧ ಪ್ರವೃತ್ತಿಯನ್ನು ಹೊಂದಿರುವವರನ್ನು ನೋಡಿದಾಗ ಇಂತಹ ವಿಕೃತ ಮನಸ್ಥಿತಿಯ ಕಾಮಿಗೆ ಸರಿಯಾದ ಶಿಕ್ಷೆಯಾಗಿದೆ ಎಂದು ಸಮಾಧಾನ ಪಟ್ಟುಕೊಳ್ಳಬೇಕೋ. ಅಥವಾ ಆ ತಾಯಿಯ ದುಃಖವನ್ನು ಕಂಡು ದ್ರವಿಸಿದ ಮನಸ್ಸನ್ನು ಸಾಂತ್ವನ ಗೊಳ್ಳಲು ಬಿಟ್ಟುಬಿಡಬೇಕೋ ಅಥವಾ ರಂಗೋಲಿಯ ಕೆಳಗೆ ನುಸುಳುವ ಇಂತಹ ವಿಕೃತರನ್ನು ಹಾಡು ಹಗಲೇ ಕೊಂದು ಹಾಕಬೇಕೋ, ಎಲ್ಲರ ಆವೇಶವನ್ನು ಮೌನಕ್ಕೆ ತಿರುಗಿಸಿ ಒಂದಷ್ಟು ಮೇಣದ ಬತ್ತಿಗಳನ್ನು ಹಚ್ಚಿ ಉರಿಸಿ ಆ ಪುಟ್ಟ ಆತ್ಮಕ್ಕೆ ಶಾಂತಿಯನ್ನು ಕೋರಿ ನಮ್ಮೆದೆಯಲ್ಲಿ ಆ ಕ್ಷಣಕ್ಕೆ ಜ್ವಲಿಸುವ ಬೇಗೆಯನ್ನು ಆರಿಸಬೇಕೋ.... ಸಾಂತ್ವನ ಸೂಚಿಸಿದ, ಪ್ರತಿಭಟನೆ ಮಾಡಿದ, ಮೇಣದ ಬತ್ತಿ ಉರಿಸಿ ಶಾಂತಿಯುತ ಹೋರಾಟ ಮಾಡಿ ಒಂದಷ್ಟು ಫೋಟೋಗಳನ್ನು ತೆಗೆಸಿಕೊಂಡು ಪತ್ರಿಕೆಯ ಪುಟಗಳನ್ನು ತುಂಬಿಸಿದರೆ. ಹೀಗೆ ಯಾವುದನ್ನು ಮಾಡಿದರೂ ಹಾರಿ ಹೋದ ಜೀವ ಮತ್ತೆ ಬರಲಾರದು.

ಮತ್ತೆ ಕೆಲವೇ ದಿನಗಳಲ್ಲಿ ಎಲ್ಲವೂ ತಣ್ಣಗಾಗಿ ಸಹಜ ಸ್ಥಿತಿಗೆ ಬರುತ್ತದೆ. ಬಲಿಯಾದ ಬಾಲಕಿಯ ಪಾಲಕರಿಗೆ



ಮಗಳ ಸಾವಿನ ಪರಿಹಾರದ ಹಣ ದೊರೆಯುತ್ತದೆ, ಈ ವಿಷಯ ಪತ್ರಿಕೆಗಳ ಒಂದೆರಡು ದಿನಗಳ ಸುದ್ದಿಗೆ ಗ್ರಾಸ ವಾಗುತ್ತದೆ, ಮಹಿಳಾಪರ ಹೋರಾಟಗಾರರ ಆಕ್ರೋಶಕ್ಕೆ ಕಾರಣವಾಗುತ್ತದೆ. 24/7 ಬಾಯಿ ಬಡಿದುಕೊಳ್ಳುವ ನ್ಯೂಸ್ ಚಾನೆಲ್ ಗಳು ತಮ್ಮ ಚಾನಲ್ನ ಟಿಆರ್‌ಪಿ ಏರಿಸಿಕೊಳ್ಳಲು ಕ್ಷಣಕ್ಕೊಂದು ಹೊಸ ಮಾಹಿತಿಯನ್ನು ಒದಗಿಸುವಂತೆ ಅದದೇ ವಿಷಯವನ್ನು ರೀಲ್ ಸುತ್ತಿ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳಲು ಹೆಣಗಾಡುತ್ತಾರೆ. ಇನ್ನು ಟಿವಿಯ ಮುಂದೆ ಕುಳಿತು ಈ ವಿಷಯಗಳ ಕುರಿತು ಕೆಲಸಕ್ಕೆ ಬಾರದ ಚರ್ಚೆ ಮಾಡುತ್ತಾ, ಪ್ಯಾನಲ್ ಡಿಸ್ಕಶನ್ ನಡೆದು ಕಾನೂನು ಮತ್ತು ಸುವ್ಯವಸ್ಥೆ ಕೈಕೊಟ್ಟಿದೆ ಎಂದು ಶರಾ ಬರೆಯಲು ರಾಜಕಾರಣಿಗಳನ್ನು, ಬುದ್ಧಿಜೀವಿಗಳನ್ನು, ಸಾಮಾನ್ಯ ನಾಗರಿಕರನ್ನು ಕರೆಸಿ ಹತ್ತಿಯ ಅರಳೆಯನ್ನು ಹಿಂಜಿದಂತೆ ವಿಷಯವನ್ನು ಹಿರಿದು ಹಿಂಜಿ ಪ್ರಸಾರ ಮಾಡಲಾಗುತ್ತದೆ. ಮತ್ತೆ ಹೊಸದೊಂದು ವಿಷಯ ಹೊಸದೊಂದು ದುರ್ಘಟನೆ ನಡೆದಾಗ ಎಲ್ಲರ ಚಿತ್ತ ಅತ್ತ ಕಡೆ ತಿರುಗುತ್ತದೆ.

ಹಾಗಾದರೆ ಮುಖ್ಯವಾಗಿ ನಡೆಯಬೇಕಾಗಿರುವುದು ಏನು? ಈ ರೀತಿಯ ಕೃತ್ಯಗಳು ಏಕೆ ನಡೆಯುತ್ತವೆ? ಇಂತಹ ಕೃತ್ಯಗಳು ನಡೆಯದಂತೆ ಇರಲು ಬೇಕಾದ ಮಾನವೀಯ ಮೌಲ್ಯಗಳನ್ನು ಕಟ್ಟಿಕೊಡುವಲ್ಲಿ ನಾವು ಎಲ್ಲಿ ತಪ್ಪಿದ್ದೇವೆ ಎಂದು ಆತ್ಮವಿಮರ್ಶೆ ಮಾಡಿಕೊಳ್ಳಲೇ ಬೇಕಾದ ಕಾಲ ಯಾವಾಗಲೋ ಬಂದಿದ್ದರೂ ನಮ್ಮಗಳ ಹೇಡಿತನ, ಅಲ್ಲೆಲ್ಲೋ ನಡೆದಿದೆ ನಾವು ಸೇಫು ಎಂಬ ವಿಸ್ಮೃತಿಯ ಭಾವ ನಮ್ಮಲ್ಲಿರುವ ತನಕ ಯಾವ ಮನೆಯ ಹೆಣ್ಣು ಮಕ್ಕಳೂ ಸುರಕ್ಷಿತರಲ್ಲ.

ಎನ್ಕೌಂಟರ್ ಮಾಡುವ ಮೂಲಕ ಕೃತ್ಯವೆಸಗಿದ ಅಪರಾಧಿಗೆ ಶಿಕ್ಷೆ ದೊರೆತಿದೆ, ನಿಜ ಆದರೆ ನಿಜವಾದ ಶಿಕ್ಷೆ ಆಗಬೇಕಾಗಿರುವುದು ಅಂತಹ ಮನಸ್ಥಿತಿಗೆ. ಆರ್ಥಿಕವಾಗಿ ಅಷ್ಟೇನು ಸಬಲರಲ್ಲದ ಯುವ ಜನಾಂಗಕ್ಕೆ ಬೃಹತ್ ಆಮಿಷಗಳನ್ನು ಒಡ್ಡಿ ತಮ್ಮ ಕೊಕ್ಕೆಗೆ ಸಿಲುಕಿಸಿಕೊಳ್ಳುವ ದುಷ್ಕೃತ್ಯಗಳನ್ನು ಮಾಡುವ ಜನರ ಬಹುದೊಡ್ಡ ತಂಡಗಳು ದೇಶದೆಲ್ಲೆಡೆ ಇವೆ. ಕ್ಷಣಿಕ ಸುಖದ ಆಸೆಗಾಗಿ ಅನ್ಯಾಯ ಅತ್ಯಾಚಾರ ಕೊಲೆಯಂತಹ ದುಷ್ಕೃತಗಳು ನಡೆದೇ ಇವೆ. ಅವುಗಳನ್ನು ಮುಚ್ಚಿ ಹಾಕುವ ಹುನ್ನಾರಗಳು ಕೂಡ.

ನಮ್ಮ ಪುರಾತನವೂ ಆದ ಆದರೆ ಚಿರನೂತನವೂ ಸಾರ್ವಕಾಲಿಕವೂ ಆದ ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಮೌಲ್ಯ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದೆ. ಒಂದು ಗೋವು ಕೂಡ ಸತ್ಯವೇ ನಮ್ಮ ತಾಯಿ ತಂದೆ ಸತ್ಯವೇ ನಮ್ಮ ಬಂಧು ಬಳಗ ಎಂದು, ಕೊಟ್ಟ ಮಾತಿಗೆ ತಪ್ಪಲಾರೆ ಎಂದು ಕರ್ತವ್ಯ ಪರನಾಗಿ ಕಾರ್ಯನಿರ್ವಹಿಸಿದ್ದನ್ನು ನಾವು ಕಂಡಿದ್ದೇವೆ.

"ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಅಭ್ಯುತ್ತಾನಂ ಅಧರ್ಮಸ್ಯ ತದಾತ್ಮಾನಾಮ್ ಸೃಜಾಮ್ಯಹಂ" ಎಂಬ ಗೀತೆಯ ವಾಣಿಯಂತೆ ಯಾವಾಗ ಅಜ್ಞಾನ ಎಂಬ ಕತ್ತಲು ನಮ್ಮನ್ನು ಆವರಿಸುತ್ತದೆಯೋ ಆ ಎಲ್ಲ ಸಮಯದಲ್ಲೂ ಜ್ಞಾನದ ಬೆಳಕಿನ ಮೂಲಕ ನಾವು ಬದುಕಿನ ಉನ್ನತ ಮೌಲ್ಯಗಳನ್ನು ಅರಿಯುವ, ಪ್ರತಿಪಾದಿಸುವ ಮತ್ತು ಪಾಲಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು.

ಪ್ರತಿ ಮನೆ ಮನೆಗಳಲ್ಲೂ ಮೌಲ್ಯಗಳನ್ನು ಬಿತ್ತಿ ಬೆಳೆಯಬೇಕು. ಸಾಮಾಜಿಕ ನೀತಿ ನಿಯಮಾವಳಿಗಳನ್ನು ಧಿಕ್ಕರಿಸುವವರನ್ನು ಸಾಕ್ಷಿ ಸಮೇತ ಹಿಡಿದು ಶೀಘ್ರವಾಗಿ ಶಿಕ್ಷೆ ನೀಡುವ ಮೂಲಕ ಅನ್ಯಾಯಕ್ಕೆ ಕತ್ತರಿ ಹಾಕಬೇಕು. ನಮ್ಮ ಸಂವಿಧಾನವು ಕೊಡ ಮಾಡಿರುವ ಕಾನೂನಿನ ಕುರಿತು ಕೇವಲ ಗೌರವವಿದ್ದರೆ ಸಾಲದು ತಪ್ಪು ಮಾಡಿದವರಿಗೆ ಶಿಕ್ಷೆಯ ಭಯ, ಸರಿಯಾದ ಮಾರ್ಗದಲ್ಲಿರುವವರಿಗೆ ನ್ಯಾಯದ ಅಭಯಹಸ್ತ ದೊರೆಯಲೇಬೇಕು.

ಹೆಣ್ಣು ಮಕ್ಕಳು ಆರ್ಥಿಕವಾಗಿ ಸಶಕ್ತರಾಗಿ ವಿದೇಶಗಳಿಗೂ ಒಬ್ಬರೇ ಓಡಾಡಿ ಕಾರ್ಯ ನಿರ್ವಹಿಸುತ್ತಿರುವುದನ್ನು, ಎಲ್ಲ ರಂಗಗಳಲ್ಲೂ ಸಬಲೀಕರಣ ಸಾಧಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ ನಿಜ, ಆದರೆ ದೀಪದ ಅಡಿಯೇ ಕತ್ತಲು ಎಂಬಂತೆ ಅದೇ ಸಮಾಜದಲ್ಲಿ ದೈನಂದಿನ ನೋವು, ಹಸಿವು, ಬಡತನ, ದಾರಿದ್ರ್ಯ, ಅವಮಾನ, ದೈಹಿಕ ಶೋಷಣೆಗಳನ್ನು ಅನುಭವಿಸುವ ಹೆಣ್ಣು ಮಕ್ಕಳು ನಮಗೆ ಕಾಣಸಿಗುತ್ತಾರೆ.

ಸಮಾನ ಹಕ್ಕು, ಕರ್ತವ್ಯ ಮತ್ತು ಸಾಮಾಜಿಕ ಸ್ಥಾನಮಾನಗಳು ಕೇವಲ ಸಂವಿಧಾನದಲ್ಲಿ ಮಾತ್ರ ಅನುರಣಿಸದೆ ಪ್ರತಿ ಮನೆಯ ಹೆಣ್ಣುಮಕ್ಕಳು ತನ್ನ ಮತ್ತು ತನ್ನ ಸುತ್ತಣ ಸಮಾಜದ ಹೆಣ್ಣು ಮಕ್ಕಳ ಏಳಿಗೆಗಾಗಿ ಧ್ವನಿ ಎತ್ತಬೇಕು. ಸಾಮಾಜಿಕ, ಆರ್ಥಿಕ ಸ್ವಾವಲಂಬನೆಯ ಜೊತೆ ಜೊತೆಗೆ ವೈಯುಕ್ತಿಕ ಹೋರಾಟದ ಕಿಡಿ ಅವರಲ್ಲಿ ಪ್ರಜ್ವಲಿಸಿ ಆತ್ಮ ರಕ್ಷಣೆಗಾಗಿ ಪ್ರತಿಯೊಬ್ಬ ಹೆಣ್ಣು ಮಕ್ಕಳು ಸನ್ನದ್ಧರಾಗಬೇಕು.

ಗಂಡೇ ಇರಲಿ ಹೆಣ್ಣೇ ಇರಲಿ ತಪ್ಪು ಮಾಡಿದವರಿಗೆ ಕಠಿಣಾತಿಕಠಿಣ ಶಿಕ್ಷೆಗಳನ್ನು ನೀಡುವ ಮೂಲಕ ಕಾನೂನಿನ ದುರ್ಬಳಕೆ ಮಾಡಿಕೊಳ್ಳುವುದನ್ನು ತಪ್ಪಿಸಬೇಕು. ಮುಖ್ಯ ವಾಗಿ ನಮ್ಮ ದೇಶದ ನಾಲ್ಕನೇ ಶಕ್ತಿಯಂತಿರುವ ಪೊಲೀಸ್ ವ್ಯವಸ್ಥೆಯು ಎಲ್ಲ ರೀತಿಯ ಭ್ರಷ್ಟಾಚಾರ, ಮೇಲಧಿಕಾರಿಗಳ ಮತ್ತು ರಾಜಕಾರಣಿಗಳ ಒತ್ತಡದಿಂದ ಮುಕ್ತವಾಗಿ ನ್ಯಾಯಪರವಾಗಿ, ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುವಂತೆ ವ್ಯವಸ್ಥೆಯನ್ನು ಬಲಿಷ್ಠಗೊಳಿಸಬೇಕು. ಆ ನಿಟ್ಟಿನಲ್ಲಿ ಹೆಣ್ಣು ಮಕ್ಕಳನ್ನು ಬೆಳೆಸುವ ಪಾಲಿಸುವ ಪ್ರೋತ್ಸಾಹಿಸುವ ಬೆನ್ನುತಟ್ಟುವ ಕೈಗಳು ಸಮಾಜದ ಸರ್ವ ನಾಗರಿಕರದಾಗಿರಬೇಕು ಎಂಬ ಆಶಯದೊಂದಿಗೆ....

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**16–04–2025 – ಬುಧವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ವಿಶಾಖ |
| ಯೋಗ | : ಸಿದ್ಧಿ |
| ಕರಣ | : ಗರಜ |
| ಸೂರ್ಯೋದಯ | : 06:06:39 |
| ಸೂರ್ಯಾಸ್ತ | : 18:46:59 |
| ರಾಹು ಕಾಲ | : 12:27–14:02 |
| ಯಮಘಂಡ ಕಾಲ | : 07:42–09:17 |
| ಗುಳಿಕ ಕಾಲ | : 10:52–12:27 |



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 15–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.67 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 839 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.113 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1578.88 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 162 ಕ್ಯುಸೆಕ್ |
| ಸಾಮರ್ಥ್ಯ | 3.950 ಟಿಎಂಸಿ |

**ಮೈಕ್ರೋ ನ್ಯೂಸ್**

### ಬಳ್ಳಾರಿಯಲ್ಲಿ ಕನ್ನಡದ ತೇರು ಎಳೆಯೋಣ

ಮೊದಲ ಪುಟದಿಂದ

ಅವರ ಕುಟುಂಬಸ್ಥರನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ನಾಡೋಜ ಡಾ.ಮಹೇಶ್ ಜೋಶಿ ತಿಳಿಸಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಾಗಿ ಮತ್ತು ಅಚ್ಚು-ಕಟ್ಟಾಗಿ ಆಯೋಜಿಸುವ ಕುರಿತು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ ಶೋಭಾರಾಣಿ, ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷ ಪಟೇಲ್ ಪಾಂಡು, ಜಿಲ್ಲಾಧ್ಯಕ್ಷ ಡಾ.ನಿಷ್ಠಿ ರುದ್ರಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

### ಏ.17 ರಂದು ವಿಶೇಷ ಆಯ್ಕೆ ಶಿಬಿರ

**ಹಂಪಿ ಟೈಮ್ಸ್ ಬಳ್ಳಾರಿ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2025–26ನೇ ಸಾಲಿನ ಕ್ರೀಡಾ ವಸತಿ ಶಾಲೆ/ನಿಲಯಗಳಿಗೆ 8ನೇ ತರಗತಿ ಮತ್ತು ಪ್ರಥಮ ಪಿಯುಸಿ ಮಟ್ಟದ ಅರ್ಹ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಪ್ರವೇಶಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಈಗಾಗಲೇ ಜಿಲ್ಲಾ ಹಾಗು ವಿಭಾಗ ಮಟ್ಟದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದ್ದು, ಆಯ್ಕೆ ಶಿಬಿರಗಳಲ್ಲಿ ವಿವಿಧ ಕಾರಣಗಳಿಂದ ಭಾಗವಹಿಸಲು ಸಾಧ್ಯವಾಗದ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ನೀಡಲು ಬಳ್ಳಾರಿ ಜಿಲ್ಲೆಯಲ್ಲಿ ಫುಟ್ಬಾಲ್ ಕ್ರೀಡೆಗೆ ಏ.17 ರಂದು ನಗರದ ಬಿಡಿಎಎ ಫುಟ್‌ಬಾಲ್ ಮೈದಾನದಲ್ಲಿ ವಿಶೇಷ ಆಯ್ಕೆ ಶಿಬಿರ ಆಯೋಜಿಸಲಾಗುವುದು.

ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳ ದೈಹಿಕ ಪರೀಕ್ಷೆಯನ್ನು ನಡೆಸಲಾಗುವುದು. ಭಾಗವಹಿಸುವ ಕ್ರೀಡಾ ಪಟುಗಳು 7ನೇ ತರಗತಿ, 10 ತರಗತಿ ವ್ಯಾಸಂಗ ಮಾಡುತ್ತಿರುವ ಕ್ರೀಡಾಪಟುಗಳು ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದು. 8 ನೇ ತರಗತಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಪ್ರಸ್ತುತ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, 8 ನೇ ತರಗತಿ ಪ್ರವೇಶಕ್ಕೆ ಜೂನ್ 2025 ಕ್ಕೆ ಅನ್ವಯವಾಗುವಂತೆ 14 ವರ್ಷ ವಯಸ್ಸು ಹೊಂದಿರಬೇಕು. ಪ್ರಥಮ ಪಿಯುಸಿ ಪ್ರವೇಶ ಬಯಸುವ ಅಭ್ಯರ್ಥಿಗಳ ವಯಸ್ಸು ಜೂನ್ 2025 ಕ್ಕೆ ಅನ್ವಯವಾಗುವಂತೆ 18 ವರ್ಷ ವಯಸ್ಸು ಹೊಂದಿರಬೇಕು.

ಈ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಇಲಾಖೆಯಿಂದ ನೀಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಎಂ.ಜಾಕೀರ್ (ಮೊ.9036335986) ಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

**ಜಿಲ್ಲಾ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ್ ನಂದಗಡಿ ಹೇಳಿಕೆ । ವಿಚಾರ ಸಂಕಿರಣದ ಕಾರ್ಯಾಗಾರ**

# ಮಾದಕ ವಸ್ತು ಬಳಸಿದರೆ ಬದುಕು ನರಕ

**ಹಂಪಿ ಟೈಮ್ಸ್ ಹೊಸಪೇಟೆ**

ಮಾದಕ ವಸ್ತುಗಳ ಬಳಕೆ ವೈರಸ್ ಇದ್ದಂತೆ ಒಂದು ಬಾರಿ ಸೋಂಕಿತರಾದರೇ ಗುಣಮುಖರಾಗುವುದು ಕಷ್ಟ ಸಾಧ್ಯ. ಯುವಜನತೆ ಇವುಗಳಿಂದ ದೂರುವಿದ್ದರೇ ಉಜ್ವಲ ಭವಿಷ್ಯ ನಿಮ್ಮದಾಗಲಿದೆ ಎಂದು ಜಿಲ್ಲಾ ನ್ಯಾಯಧೀಶರಾದ ಅಬ್ದುಲ್ ರಹೀಮಾನ್ ಎ.ನಂದಗಡಿ ಹೇಳಿದರು.

ನಗರದ ವಿಜಯನಗರ ಮಹಾವಿದ್ಯಾಲಯದಲ್ಲಿ ತಾಲೂಕು ಕಾನೂನುಗಳ ಸೇವಾ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಿಜಯನಗರ ಇವರ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ ಮಾದಕ ವಸ್ತುಗಳ ದುರ್ಬಳಕೆ ತಡೆಗಟ್ಟುವಿಕೆ ಮತ್ತು ನಿರ್ವಹಣೆ ಹಾಗೂ ಎನ್‌ಡಿಪಿಎಸ್ ಕಾಯ್ದೆ ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದ ಕಾರ್ಯಾಗಾರ ಉದ್ಘಾಟಿಸಿ ಮಂಗಳವಾರ ಮಾತನಾಡಿದರು. ಯುವಜನತೆಯಲ್ಲಿ ಮಾದಕ ವಸ್ತುಗಳ ವ್ಯಾಮೋಹ ಹೆಚ್ಚಾಗಿದ್ದು, ಅದರ ದುಷ್ಪಾರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳು ಸಾಮಾಜಿಕ ಜವಾಬ್ದಾರಿಯಿಂದ ಇಂತಹ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗುತ್ತಿದೆ. ನಿಗಧಿತ ಗುರಿ ಸಾಧಿಸಲು ಸಧೃಡ ಮಾನಸಿಕತೆ, ದೈಹಿಕ ಆರೋಗ್ಯ, ಬೌದ್ಧಿಕ ದೃಡತೆ ಅಗತ್ಯವಿದೆ. ಮಾದಕ ವಸ್ತುಗಳ ಬಳಕೆ ಸೇರಿದಂತೆ ವ್ಯಸನಗಳಿಗೆ ದಾಸರಾದರೇ ನಿಮ್ಮಲ್ಲಿರುವ ಎಲ್ಲಾ ಸಾಮಾರ್ಥ್ಯ ವಿನಾಶವಾಗಲಿವೆ. ವಿದ್ಯಾರ್ಥಿ ಜೀವನದಲ್ಲಿ ಓದು, ಜ್ಞಾನ ಸಂಪಾದನೆ, ನಿಗಧಿತ ಗುರಿ ಸಾಧನೆಗೆ ಕಠಿಣ ಪರಿಶ್ರಮ ಇಷ್ಟಕ್ಕೆ ಮಾತ್ರ ಹೆಚ್ಚು ಆದ್ಯತೆ ನೀಡಬೇಕು. ಹಾಗಾದರೆ ನಿಮ್ಮ ಪೋಷಕರ ಕನಸುಗಳನ್ನು



ನನಸು ಮಾಡಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನ್ಯಾಯಾಧೀಶರಾದ ಪ್ರಶಾಂತ್ ನಾಗಲಾಪುರ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಅನುಕರಣೆ ಮತ್ತು ವ್ಯಾಮೋಹ ಮನಸ್ಥಿತಿ ಹೆಚ್ಚಾಗಿರುತ್ತದೆ. ಒಳ್ಳೆಯದಕ್ಕಿಂತ ಕೆಟ್ಟದರ ಆಕರ್ಷಣೆ ಹೆಚ್ಚಾಗಿರಲಿದೆ. ಹಾಗಾಗಿ ಮಾದಕ ವಸ್ತುಗಳ ದುರ್ಬಳಕೆಗೆ ಹೆಚ್ಚು ಬಲಿಯಾಗುತ್ತಿರುವರಲ್ಲಿ ಯುವ ಸಮೂಹವೇ ಹೆಚ್ಚಾಗಿರುವ ಹಿನ್ನಲೆಯಲ್ಲಿ ಜಾಗೃತಿ ಮೂಡಿಸಬೇಕಾದ ಅನಿವಾರ್ಯತೆ ಸಂಘ, ಸಂಸ್ಥೆಗಳ ಹೊಣೆಗಾರಿಕೆಯಾಗಿದೆ. ಉಜ್ವಲ ಭವಿಷ್ಯ ಕಟ್ಟಿಕೊಳ್ಳಲು ಮಾದಕ ವಸ್ತುಗಳ ದುಷ್ಪಾರಿಣಾಮಗಳನ್ನು ಅರಿವು ಪಡೆದುಕೊಳ್ಳಬೇಕಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಲ್.ಶ್ರೀಹರಿಬಾಬು ಮಾತನಾಡಿ ಯುವಕರು ಯಾವುದೇ ರೀತಿಯ ಮಾದಕ ವಸ್ತುಗಳನ್ನು ಬಳಸಬಾರದು ಹಾಗೂ ಮಾದಕ ವಸ್ತುಗಳಿಂದ ಅಗುವ ದುಷ್ಪರಿಣಾಮದ ಬಗ್ಗೆ ತಿಳಿದಿರಬೇಕು. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಹೆಚ್ಚಿನ ಸಮಯವನ್ನು ಮಿಸಲಿಡಬೇಕು. ವಿದ್ಯಾಭ್ಯಾಸ ಹಾಗೂ ಒಳ್ಳೆಯ ಉದ್ದೇಶಕ್ಕೆ ಮೊಬೈಲ್‌ಗಳನ್ನು ಬಳಸಬೇಕು, ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ವಿಚಾರ ಸಂಕಿರಣವನ್ನು ವಿದ್ಯಾರ್ಥಿಗಳನ್ನ ಗುರಿಯಾಗಿಸಿ ಆಯೋಜನೆ ಮಾಡಿರುವುದು ವಿದ್ಯಾರ್ಥಿಗಳ ವಯಸ್ಸು, ವಯೋಮಿತಿಗೆ ತಕ್ಕಂತೆ ಸೆಳೆತಗಳು ಹೆಚ್ಚು. ಅದರಲ್ಲೂ ಮದ್ಯ, ಮಾದಕ ವಸ್ತುಗಳು ಮನಸ್ಸಿಗೆ ಆಹ್ಲಾದಕತೆಯನ್ನು ಹೆಚ್ಚಿಸಿ ನಶೆಯುಕ್ತರನ್ನಾಗಿಸುವ ನಿಟ್ಟಿನಲ್ಲಿ ವ್ಯಸನಗಳಿಗೆ ಬಲಿಯಾಗುವವರ ಸಂಖ್ಯೆ ಹೆಚ್ಚು. ಇಂತಹ ವ್ಯಸನಗಳಿಂದ ಆರೋಗ್ಯ ಸಮಸ್ಯೆಗಳು ಹೆಚ್ಚಲಿವೆ ಎಂದರು.

ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಫಿಜಿಷಿಯನ್ ಡಾ.ಸೋಮಶೇಖರ್ ಮಾತನಾಡಿ, ಮಾದಕ ವಸ್ತುಗಳಿಗೆ ವ್ಯಸನಗೊಳ್ಳುವ ಪ್ರಮುಖ ಕಾರಣ ಒಂಟಿತನ, ಅಧಿಕ ಹಣ ಮುಖ್ಯವಾಗಿದೆ. ಮದ್ಯ, ನಿಕೋಟಿನ್, ಗಾಂಜಾ ಸುಲಭವಾಗಿ ಸಿಗುವ ಮಾದಕ ವಸ್ತುಗಳಾಗಿವೆ. ಸಿಗರೇಟು, ಬೀಡಿ ಮತ್ತು ತಂಬಾಕುಗಳಿಂದ ಹೃದಯಾಘಾತ ಮತ್ತು ಹೃದಯ ಸಂಬಂಧಿ ಖಾಯಿಲೆಗಳು, ಬಾಯಿ ಕ್ಯಾನ್ಸರ್, ಧ್ವನಿ ಪೆಟ್ಟಿಗೆ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್, ಇತರೆ ಅಂಗಾಂಗಳ ಕ್ಯಾನ್ಸರ್, ಅಸ್ತಮಾ, ಕ್ಷಯರೋಗ, ಶ್ವಾಸಕೋಶ ಸಂಬಂಧಿತ ಸೋಂಕುಗಳು, ಮಧುಮೇಹ, ಮರೆವಿನ ಕಾಯಿಲೆ, ನಪುಂಸಕತ್ವ, ದೃಷ್ಟಿ ದೋಷ ಮತ್ತು ಶ್ರವಣದೋಷ, ರೋಗ ನಿರೋಧಕ ಶಕ್ತಿ ಕುಂಠಿತ, ಮೂಳೆ ಸವೆತ, ಚರ್ಮ ಸಂಬಂಧಿ ಕಾಯಿಲೆಗಳು ಸೇರಿದಂತೆ ಮಹಿಳೆಯರಿಗೆ ಋತು ಚಕ್ರದ ಸಮಸ್ಯೆ, ಬಂಜೆತನ, ಗರ್ಭಧಾರಣೆಯಲ್ಲಿ ಕುಂಠಿತ, ಗರ್ಭಪಾತ, ಗರ್ಭಕೋಶ ಮತ್ತು ಗರ್ಭಕಂಠದ ಕ್ಯಾನ್ಸರ್ ಸಮಸ್ಯೆಗಳು ಹೆಚ್ಚಾಗಲಿವೆ. ಕೇವಲ ಕ್ಷಣಿಕ ಸುಖದ ಸೆಳೆತಕ್ಕೆ ಸಿಕ್ಕು ಅನಾರೋಗ್ಯ ಪೀಡಿತರಾಗಲಿದ್ದೀರಿ ಎಂದು ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ವಿಜಯನಗರ ಮಹಾವಿದ್ಯಾಲಯದ ಅಧ್ಯಕ್ಷರಾದ ಮೆಟ್ರಿ ಮಲ್ಲಿಕಾರ್ಜುನ, ಹಿರಿಯ ನ್ಯಾಯಾಧೀಶರಾದ ಹೇಮಲತಾ.ಬಿ.ಹುಲ್ಲೂರು, ಬಿ. ಎನ್.ರಮೇಶ್‌ಬಾಬು ಜೆ.ಚೈತ್ರ, ಶೃತಿ ತೇಲಿ, ವಕೀಲರ ಸಂಘದ ಅಧ್ಯಕ್ಷ ಪ್ರಹ್ಲಾದ್, ಪ್ರಧಾನ ಕಾರ್ಯದರ್ಶಿ ಪಿ.ಶ್ರೀನಿವಾಸಮೂರ್ತಿ, ವಿಜಯನಗರ ಮಹಾವಿದ್ಯಾಲಯ ಆಡಳಿತ ಮಂಡಳಿಯ ಸದಸ್ಯರಾದ ಗುಡೇಕೋಟೆ ನಾಗರಾಜ, ನಟರಾಜ ಅಕ್ಕಿ, ಪ್ರಾಚಾರ್ಯರಾದ ಪ್ರಭುಗೌಡ ಸೇರಿದಂತೆ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಜಿಟಿಟಿಸಿ ಕಾಲೇಜು ಪ್ರಾಚಾರ್ಯ ಅಂಜನ್ ಕುಮಾರ್ ಅಭಿಮತ । ಎಸ್ಸೆಸ್ಸೆಲ್ಸಿ ನಂತರ ಮುಂದೇನು ತರಬೇತಿ ಕಾರ್ಯಾಗಾರ**

# ಶಿಕ್ಷಣದ ಜತೆಗೆ ಕೌಶಲ್ಯ ಅಗತ್ಯ

## ಎಸ್ಸೆಸ್ಸೆಲ್ಸಿ ನಂತರ ಅವಕಾಶಗಳು ಹಲವು । ಆಯ್ಕೆಗೆ ಗುರಿ, ಆಸಕ್ತಿ ಮುಖ್ಯ



**ಹಂಪಿ ಟೈಮ್ಸ್ ಹೊಸಪೇಟೆ**

ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ತಾಂತ್ರಿಕ ಕೋರ್ಸ್‌ಗಳ ಅಧ್ಯಯನ ಮಾಡುವುದರಿಂದ ಕೌಶಲ್ಯ ನೈಪುಣ್ಯತೆ ವೃದ್ಧಿಯಾಗಲಿದೆ ಎಂದು ಜಿಟಿಟಿಸಿ ಕಾಲೇಜು ಪ್ರಾಚಾರ್ಯರಾದ ಡಿ.ಅಂಜನ್ ಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಹಗರಿಬೊಮ್ಮನಹಳ್ಳಿ ಪಟ್ಟಣದ ವಾಲ್ಮೀಕಿ ಭವನದಲ್ಲಿ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಿಂದ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಏರ್ಪಡಿಸಿದ್ದ ಎಸ್ಸೆಸ್ಸೆಲ್ಸಿ ನಂತರ ಮುಂದೇನು ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಂಗಳವಾರ ಮಾತನಾಡಿದರು, 1972ರಲ್ಲಿ ಡೆನ್ಮಾರ್ಕ್ ಸರ್ಕಾರ ಮತ್ತು ಭಾರತ ಸರ್ಕಾರದ ಸಹಯೋಗದೊಂದಿಗೆ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ ಸ್ಥಾಪನೆಯಾಯಿತು. ಹೊಸಪೇಟೆ ಕೇಂದ್ರವು 1996 ರಲ್ಲಿ ಸ್ಥಾಪನೆಯಾಗಿ ಪ್ರಸ್ತುತ ಮರಿಯಮ್ಮನಹಳ್ಳಿ ಸುವ್ಯವಸ್ಥಿತ ತಾಂತ್ರಿಕ ಅಧ್ಯಯನ ಮತ್ತು ಉತ್ತಮ ಬೋಧನೆಯನ್ನು ನಡೆಸಲಾಗುತ್ತಿದೆ ಎಂದರು.

ಸಂಪನ್ಮೂಲ ವ್ಯಕ್ತಿ ಅಕ್ಕಿ ಬಸವರಾಜ ಮಾತನಾಡಿ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಜೀವನದಲ್ಲಿ ಪ್ರಮುಖ ಘಟ್ಟವಾಗಿದೆ. ಪಿಯುಸಿಯಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳಲ್ಲಿ ಪದವಿ ಪಡೆಯಲು ಆಸಕ್ತ ವಿಷಯಗಳನ್ನು ಸ್ವತಂತ್ರವಾಗಿ ಆಯ್ಕೆ ಮಾಡಿಕೊಳ್ಳಬಹುದು. ಪದವಿ ಶಿಕ್ಷಣದಲ್ಲಿ ಪ್ರತ್ಯೇಕ ವಿಷಯಗಳಲ್ಲಿ ಐಚ್ಛಿಕವಾಗಿ ಆಯ್ಕೆ ಮಾಡಿಕೊಂಡು ಸ್ನಾತಕ ಪದವಿಗಳನ್ನು ಪಡೆಯ ಬಹುದಾಗಿದೆ. ಬೋಧಕ, ಬೋಧಕೇತರ ಹುದ್ದೆಗಳಿಗೆ ಪದವಿ ಮತ್ತು ಸ್ನಾತಕ ಪದವಿಗಳು ಸಹಕಾರಿಯಾಗಲಿವೆ. ಅಷ್ಟಲ್ಲದೇ ಆಡಳಿತಾತ್ಮಕ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪದವಿ ಶಿಕ್ಷಣ ತುಂಬಾ ಅಗತ್ಯವಿದೆ. ತಾಂತ್ರಿಕ ಕೋರ್ಸ್‌ಗಳನ್ನು ಅಧ್ಯಯನ ಮಾಡುವುದರಿಂದ ಅನೇಕ ಉದ್ಯೋಗ ಅವಕಾಶಗಳು ಖಾಸಗಿ ಕಂಪನಿ ಸೇರಿದಂತೆ ಸರ್ಕಾರಿ ವಲಯದಲ್ಲಿ ಲಭ್ಯತೆ ಇರಲಿವೆ. ಅಷ್ಟಲ್ಲದೇ ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳಲ್ಲಿ ಉದ್ಯೋಗ ಆಸಕ್ತರಿಗೆ ವಾಣಿಜ್ಯ ಪದವಿಗಳು ಸಹಕಾರಿಯಾಗಲಿವೆ. ಕೃಷಿ, ಕೈಗಾರಿಕೆ, ತೋಟಗಾರಿಕೆ, ವೈದ್ಯಕೀಯ ಶಿಕ್ಷಣ, ಅರಣ್ಯ, ಪಶು ಸಂಗೋಪನೆ ಸೇರಿದಂತೆ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆಗೈಯಲು ವಿಜ್ಞಾನ ವಿಷಯದಲ್ಲಿ ಪದವಿ ಪಡೆಯುವುದರಿಂದ ಅನೇಕ ಸರ್ಕಾರಿ ವಲಯದಲ್ಲಿ ಅವಕಾಶಗಳು ಲಭ್ಯವಾಗಲಿವೆ. ಇಂಜಿನಿಯರಿಂಗ್ ಪದವಿ ಪಡೆಯಲು ಆತಿಥ್ಯ, ಅನಿಮೇಷನ್, ಬುಸಿನೆಸ್, ಮಾಹಿತಿ ಮತ್ತು ತಂತ್ರಜ್ಞಾನ, ಆಟೋಮೊಬೈಲ್ ಕ್ಷೇತ್ರದಲ್ಲಿ ಅನೇಕ ಡಿಪ್ಲೋಮಾ ಕೋರ್ಸ್‌ಗಳು ಆರಂಭವಾಗಿದೆ. ಸ್ವಾವಲಂಬಿಯಾಗಿ ಕೌಶಲ್ಯ ಶಿಕ್ಷಣ ಬಯಸುವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಕೌಶಲ್ಯಾಭಿವೃದ್ಧಿ ಯೋಜನೆಗಳನ್ನು ರೂಪಿಸಲಾಗಿದೆ ಎಂದರು.

ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತುದಾರ ವಿ. ಎಂ.ಗವಿಸಿದ್ದೇಶ್ ಉಪನ್ಯಾಸದಲ್ಲಿ ಮಾತನಾಡಿ, ವಿದ್ಯಾರ್ಥಿ ದಿಸೆಯಿಂದಲೇ ಭವಿಷ್ಯದ ಗುರಿಯನ್ನು ನಿಗಧಿಪಡಿಸಿಕೊಳ್ಳಬೇಕು. ಪಾಲಕರು ತಮ್ಮ ಮಕ್ಕಳ ಆಸಕ್ತ ವಿಷಯಗಳಗೆ ಆದ್ಯತೆ ನೀಡಿ ಕೋರ್ಸ್‌ಗಳಿಗೆ ಸೇರಿ ಉತ್ತಮ ಅಧ್ಯಯನದಿಂದ ಉತ್ತಮ ಫಲಿತಾಂಶವನ್ನು ನಿರೀಕ್ಷಿಸಬಹುದಾಗಿದೆ. ಒತ್ತಾಯ ಪೂರ್ವಕವಾಗಿ ಅವರಿಗಿಷ್ಟವಿಲ್ಲದ ಕೋರ್ಸ್‌ಗಳಿಗೆ ದಾಖಲಿಸಿದರೇ ಮಕ್ಕಳು ಮಾನಸಿಕ ಖಿನ್ನತೆಯಿಂದ ಓದುವಿಕೆಯಲ್ಲಿ ನಿರಾಸಕ್ತಿ ಹೊಂದಲಿದ್ದಾರೆ ಎಂದರು. ಈ ವೇಳೆ ಜಿಟಿಟಿಸಿ ಕೇಂದ್ರದ ಉಪನ್ಯಾಸಕ ಟಿ.ಮಂಜುನಾಥ, ತೇಜಕುಮಾರ್ ಇದ್ದರು.

# ಏ.15 ರಿಂದ 25 ರವರೆಗೆ ಕೆಓಎಸ್ ಪರೀಕ್ಷೆ ಆರಂಭ

## ಪರೀಕ್ಷಾ ಕೇಂದ್ರ ಸುತ್ತ ನಿಷೇಧಾಜ್ಞೆ ಜಾರಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಆದೇಶ

**ಹಂಪಿ ಟೈಮ್ಸ್ ಹೊಸಪೇಟೆ**



ನಗರದ ಸೇಂಟ್ ಜೋಸೆಫ್ ಹೈ ಸ್ಕೂಲ್‌ನಲ್ಲಿ ಏಪ್ರಿಲ್ 15 ರಿಂದ 25 ರವರೆಗೆ ನಡೆಯಲಿರುವ ಕೆ.ಓ.ಎಸ್ ಪರೀಕ್ಷೆಗಳ ಹಿನ್ನಲೆಯಲ್ಲಿ ಪರೀಕ್ಷಾ ಕೇಂದ್ರದ ಸುತ್ತಮುತ್ತಲಿನ 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ನಿಷೇಧಾಜ್ಞೆ ಜಾರಿ ಮಾಡಿ ಆದೇಶಿಸಲಾಗಿದೆ. ಆದ್ದರಿಂದ ಪರೀಕ್ಷಾ ಕೇಂದ್ರದ ಬಳಿಯಿರುವ ಜೆರಾಕ್ಸ್, ಕಂಪ್ಯೂಟರ್ ಮತ್ತು ಸೈಬರ್ ಅಂಗಡಿಗಳನ್ನು ಮುಚ್ಚುವಂತೆ ತಿಳಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಪ್ರದೇಶದಲ್ಲಿ ಪರೀಕ್ಷಾರ್ಥಿಗಳಲ್ಲದ, ಪರೀಕ್ಷಾ ಉಸ್ತುವಾರಿ ಇಲ್ಲದ ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರು ಅಥವಾ ಯಾವುದೇ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಕಡ್ಡಾಯವಾಗಿ ಪ್ರವೇಶ ನಿಷೇಧಿಸಿದೆ, ಈ ಆದೇಶವನ್ನು ಉಲ್ಲಂಘಿಸಿ ಪ್ರವೇಶಿಸಿದರೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ತರಬೇತಿಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತ ನಿರುದ್ಯೋಗಿಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗ್ರಾಮೀಣ ಸ್ವಯಂ ಉದ್ಯೋಗಕ್ಕಾಗಿ ಮಹಿಳಾ ಹೊಲಿಗೆ ತರಬೇತಿ ಮತ್ತು ಬ್ಯೂಟಿ ಪಾರ್ಲರ್ ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ.

ಮಹಿಳಾ ಹೊಲಿಗೆ ತರಬೇತಿ ಹಾಗೂ ಬ್ಯೂಟಿ ಪಾರ್ಲರ್ ತರಬೇತಿಯು 30 ದಿನಗಳು ನಡೆಯಲಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯ ನೀಡಲಾಗುವುದು. ಅರ್ಜಿದಾರರು ವಿಜಯನಗರ ಜಿಲ್ಲೆಯ ಗ್ರಾಮೀಣ ಭಾಗದವರಾಗಿರಬೇಕು. ಕನಿಷ್ಠ 8 ನೇ ತರಗತಿ ಉತ್ತೀರ್ಣರಾಗಿರಬೇಕು. ವಯೋಮಿತಿ 18 ರಿಂದ 45 ವರ್ಷದೊಳಗಿದ್ದು ಸ್ವಯಂ ಉದ್ಯೋಗದಲ್ಲಿ ಆಸಕ್ತಿ ಹೊಂದಿರಬೇಕು. ಅರ್ಜಿ ಸಲ್ಲಿಸಲು ಆಧಾರ ಕಾರ್ಡ್, ರೇಷನ್ ಕಾರ್ಡ್, ಅಂಕಪಟ್ಟಿ ಜೆರಾಕ್ಸ್ ಪ್ರತಿಯೊಂದಿಗೆ 3 ಪಾಸ್‌ಪೋರ್ಟ್ ಸೈಜ್ ಪೋಟೋಗಳೊಂದಿಗೆ ನಿರ್ದೇಶಕರ ಕಚೇರಿ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ, ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಆವರಣ, ಪೈ ಹೋಟೆಲ್ ಎದುರುಗಡೆ, ಬಸ್‌ಸ್ಟಾಂಡ್ ಹತ್ತಿರ ಹೊಸಪೇಟೆ ವಿಳಾಸಕ್ಕೆ ಅರ್ಜಿಗಳನ್ನು ಸಲ್ಲಿಸಬೇಕು. ಏ.25 ರಂದು ಸಂದರ್ಶನ ನಡೆಯಲಿದ್ದು, ಏ.26 ರಿಂದ ತರಬೇತಿಗಳು ಆರಂಭವಾಗಲಿವೆ. ಹೆಚ್ಚಿನ ಮಾಹಿತಿಗಾಗಿ ಮೊ. 8861646570, 6360878255, 9481085217 ಸಂಪರ್ಕಿಸಬೇಕು.

**ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಬೇಸಿಗೆ ಶಿಬಿರ ಉದ್ಘಾಟನೆ । ಜಿಲ್ಲಾ ಅಗ್ನಿಶಾಮಕ ಅಧಿಕಾರಿ ವಾಲಿ ಪ್ರಮೋದ್ ಸಲಹೆ**

# ಬೆಂಕಿ ಅವಘಡಗಳಲ್ಲಿ ಅತ್ಮಸ್ಥೈರ್ಯ ಮುಖ್ಯ




**ಹಂಪಿ ಟೈಮ್ಸ್ ಹೊಸಪೇಟೆ**

ಅಗ್ನಿ ಅವಘಡಗಳು ಆಕಸ್ಮಿಕ ದುರಂತಗಳಾಗಿದ್ದು, ಧೈರ್ಯವೇ ಸರ್ವತ್ರ ಸಾಧನವಾಗಿದೆ. ತುರ್ತು ಸೇವೆ ನೀಡಿ ಜೀವ ಸಂರಕ್ಷಣೆಗೆ ಆದ್ಯತೆ ನೀಡುವುದು ಅಗ್ನಿಶಾಮಕ ದಳದ ಕರ್ತವ್ಯವಾಗಿದೆ ಎಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ವಾಲಿಪ್ರಮೋದ್ ಹೇಳಿದರು.

ನಗರದ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಹಾಗೂ ಡಿಎವಿ ಪಬ್ಲಿಕ್ ಶಾಲೆಯ ಸಹಯೋಗದಲ್ಲಿ ಏರ್ಪಡಿಸಿದ್ದ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಂಗಳವಾರ ಮಾತನಾಡಿದರು, ಬೆಂಕಿ ಅವಘಡಗಳಲ್ಲಿ ಧೈರ್ಯ, ತಾಳ್ಮೆಯಿಂದ ಸೇವೆ ನೀಡಲು ಮುಂದಾಗಬೇಕು. ಅಗ್ನಿ ದುರಂತಗಳು ನಡೆದಾಗ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಅರಿತಿರಬೇಕು ಎಂದರು. ಬಳಿಕ ಫೈಯರ್ ಇಂಜಿನ್ ಸಹಾಯದಿಂದ ದೊಡ್ಡ ಬೆಂಕಿಗಳನ್ನು ಆರಿಸುವ ಪ್ರಾತ್ಯಕ್ಷಿಕೆಯನ್ನು ತೋರಿಸಿದರು. ಕಟ್ಟಡಗಳಿಗೆ ಬೆಂಕಿ ಬಿದ್ದಾಗ ಅಗ್ನಿ ನಿರೋಧಕ ಉಡುಪು ಮತ್ತು ಕೃತಕ ಉಸಿರಾಟ ಸಿಲಿಂಡರ್‌ನೊಂದಿಗೆ ಅಗ್ನಿಯಲ್ಲಿ ಪ್ರವೇಶಿಸಿ ಪ್ರಾಣರಕ್ಷಣೆ ಮನೆಗಳಲ್ಲಿ ಬಳಸುವ ಎಲ್‌ಪಿಜಿ ಸಿಲಿಂಡರ್ ಸ್ಫೋಟಗೊಂಡಾಗ ಮಾಡಬೇಕಾದ ಮುಂಜಾಗೃತ ಕ್ರಮಗಳನ್ನು ಅಗ್ನಿಶಾಮಕ ಉಪಕರಣಗಳನ್ನು ತಂದು ಅವುಗಳನ್ನು ಹೇಗೆ ಉಪಯೋಗಿಸಬೇಕು ಬೆಂಕಿಯನ್ನು ಹೇಗೆ ನಂದಿಸಬೇಕು ಎಂಬುದನ್ನು ಸ್ವತಃ ಸ್ಕೌಟ್ಸ್ ಗೈಡ್ಸ್‌ಗಳಿಂದಲೇ ಪ್ರಾತ್ಯಕ್ಷಿಕೆ ಮಾಡಿಸಿ ಮಕ್ಕಳಲ್ಲಿ ಧೈರ್ಯ ತುಂಬಿಸಲಾಯಿತು.

ಇದೇ ವೇಳೆ ಡಿಎವಿ ಶಾಲೆಯಲ್ಲಿ ಎರಡು ಗೈಡ್ಸ್ ಎರಡು ಸ್ಕೌಟ್ ಘಟಕಗಳಿದ್ದು 23–24ನೇ ಸಾಲಿನಲ್ಲಿ 45 ಮಕ್ಕಳು ರಾಜ್ಯ ಪುರಸ್ಕಾರ ಪಡೆದ ಮಕ್ಕಳನ್ನು ಅಭಿನಂದಿಸಿದರು. ಅಲ್ಲದೆ 24–25ನೇ ಸಾಲಿನಲ್ಲಿ ಇದೇ ಪಿಯು ಕಾಲೇಜಿನಲ್ಲಿ ರಾಜ್ಯ ಪುರಸ್ಕಾರ ಪಡೆದ ಗೈಡ್ ವಿದ್ಯಾರ್ಥಿನಿ ಕು.ಜಿ.ಎನ್ ಪೂರ್ವಿ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದಿದ್ದಕ್ಕಾಗಿ ಗೌರವಿಸಿ ಸನ್ಮಾನಿಸಲಾಯಿತು.

ಈ ವೇಳೆ ಆಡಳಿತ ವೈದ್ಯಾಧಿಕಾರಿ ಡಾ. ಹರಿಪ್ರಸಾದ್ ಆನೆಗೊಂದಿ, ಟಿಎಂಎಇಎಸ್ ಅಕಾಡೆಮಿ ಆಫ್ ಸೈನ್ಸ್ ಅಂಡ್ ಕಾಮರ್ಸ್ ನಿರ್ದೇಶಕ ಟಿ.ಎಂ ಚಂದ್ರಶೇಖರ್, ಸ್ಕೌಟ್ಸ್ ಮತ್ತು ಗೈಡ್ಸ್ ಸಂಘದ ಜಿಲ್ಲಾ ಕಾರ್ಯದರ್ಶಿ ಪಿ. ಮಂಜುನಾಥಪ್ಪ, ಡಿಎವಿ ಪಬ್ಲಿಕ್ ಶಾಲೆಯ ಪ್ರಾಚಾರ್ಯ ಎಸ್.ಅಶುತೋಷ್, ಸಂಸ್ಥೆಯ ಕಾರ್ಯದರ್ಶಿ ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

### ಭತ್ತ ಕಟಾವು ಯಂತ್ರಗಳ ಬಾಡಿಗೆ ದರ ನಿಗದಿ

ಮೊದಲ ಪುಟದಿಂದ

ಕಟಾವು ಯಂತ್ರಗಳ (Combined Harvester) ಮೂಲಕ ಕಟಾವು ಮಾಡುತ್ತಿದ್ದು, ಖಾಸಗಿ ಭತ್ತ ಕಟಾವು ಯಂತ್ರ ಮಾಲೀಕರು ರೈತರಿಂದ ಪ್ರತಿ ಗಂಟೆಗೆ ರೂ 2500 ರಿಂದ ರೂ 3000 ವರೆಗೆ ಬಾಡಿಗೆ ವಸೂಲಿ ಮಾಡುತ್ತಿರುವ ಬಗ್ಗೆ ರೈತರುಗಳಿಂದ ದೂರು ಬಂದಿರುತ್ತದೆ ಎಂದು ಕೊಪ್ಪಳ ಜಂಟಿ ಕೃಷಿ ನಿರ್ದೇಶಕರು ತಿಳಿಸಿರುತ್ತಾರೆ. ಈ ಬಗ್ಗೆ ಕೃಷಿ ಇಲಾಖೆಯ ಅಧಿಕಾರಿಗಳು, ರೈತ ಮುಖಂಡರು ಹಾಗೂ ಭತ್ತ ಕಟಾವು ಯಂತ್ರದ ಮಾಲೀಕರೊಂದಿಗೆ ಸಭೆಯನ್ನು ನಡೆಸಲಾಗಿ ಅಂದಾಜು ರೂ 2400, ನಿಗಧಿಪಡಿಸಲು ಗಂಗಾವತಿ ಸಹಾಯಕ ಕೃಷಿ ನಿರ್ದೇಶಕರು ವರದಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಭತ್ತ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ಗರಿಷ್ಠ ರೂ. 2400 ಮೀರದಂತೆ ಬಾಡಿಗೆಯನ್ನು ನಿಗದಿಪಡಿಸಲಾಗಿದೆ. ಜಿಲ್ಲೆಯಲ್ಲಿರುವ ಭತ್ತ ಕಟಾವು ಯಂತ್ರದ ಮಾಲೀಕರು ಈ ದರಕ್ಕೆ ಮೀರದಂತೆ ಭತ್ತ ಕಟಾವು ಕೈಗೊಳ್ಳಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಭತ್ತ ಕಟಾವು ಯಂತ್ರದ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.